
ಸಂಚಿಕೆ ೮೪

ಸಂಚಯ


ಕನ್ನಡ ಸಾಹಿತ್ಯ, ಸಾಂಸ್ಕೃತಿಕ ಪತ್ರಿಕೆ



ಈ ಹೊತ್ತಿನ ಕವಿತೆಗಳು

ಸಂಚಯ ಗ್ಯಾಲರಿ

ಎಸ್.ಜಿ. ವಾಸುದೇವ ಅವರ ಕಲಾಕೃತಿ
Men & Elephant - 2006
ಕೃಪೆ: "ಗತ ಪ್ರಸ್ತುತ" ಪುಸ್ತಕದಿಂದ



ಸಂಚಯ

ಕನ್ನಡ ಸಾಹಿತ್ಯ, ಸಾಂಸ್ಕೃತಿಕ ಪತ್ರಿಕೆ

ದ್ವೈಮಾಸಿಕ ■ ಸಂಪುಟ : ೧೯ ■ ಸಂಚಿಕೆ : ೧(೮೪)
ಜನವರಿ - ಫೆಬ್ರವರಿ ೨೦೧೦

ಚಿತೆಯ ಗತಿಗಾಣದ
ಅನೇಕ ನಕ್ಷತ್ರಗಳು ಸತ್ತಿದ್ದಾವೆ ಆಕಾಶದಲ್ಲಿ!
ನಮ್ಮ ಪಾಲಿಗಿನ್ನೂ ಅವುಗಳ ಬೆಳಕಿದೆ.
ಕೆಲವು ಇತ್ತೀಚೆಗೆ ಹುಟ್ಟಿದ್ದಾವೆ
ಅವುಗಳ ಬೆಳಕಿನ್ನೂ ತಲುಪಿಲ್ಲ ನಮಗೆ!
ಸೂರ್ಯನಿಗೆ ಇದ್ಯಾವುದರ ಅರಿವೂ ಇಲ್ಲ!

ಚಂದ್ರಶೇಖರ ಕಂಬಾರ

ಸಂಪಾದಕ :
ಡಿ.ವಿ. ಪ್ರಹ್ಲಾದ್

ಸಂಪರ್ಕ ವಿಳಾಸ
ನಂ. ೧೦೦, ೨ನೇ ಮುಖ್ಯರಸ್ತೆ
೬ನೇ ಬ್ಲಾಕ್, ೩ನೇ ಹಂತ,
೩ನೇ ಘಟ್ಟ, ಬನಶಂಕರಿ
ಬೆಂಗಳೂರು - ೫೬೦ ೦೮೫
ಫೋನ್ ನಂ.:೦೮೦-೨೬೭೯೧೯೨೫
ಮೊಬೈಲ್: ೯೮೪೪೦೬೩೫೧೪

email:
prahlad118@yahoo.com

ಚಂದಾವಿವರ
ವಾರ್ಷಿಕ ಚಂದಾ :
ರೂ. ೨೫೦/-
ಎರಡು ವರ್ಷಕ್ಕೆ :
ರೂ. ೫೦೦/-

ಮುಖಪುಟದ ಚಿತ್ರ:
ಎಸ್.ಜಿ. ವಾಸುದೇವ್

ಮುಖಪುಟ ಮತ್ತು
ಪುಟ ವಿನ್ಯಾಸ:
ಎಂ.ಆರ್. ಗುರುಪ್ರಸಾದ್

ಈ ಹೊತ್ತಿನ ಕವಿತೆಗಳು...

ತಾವು ಹುಡುಕುವ ಹಾದಿ....

ಸಾಹಿತ್ಯ ಸ್ಪರ್ಧೆ 2009 ಬಹುಮಾನಿತ ಕವಿತೆಗಳು

ಅಭಾವದಿಂದ ಅನುವಾದದವರೆಗೆ

ಈ ಹೊತ್ತಿನ ಕವಿತೆಗಳನ್ನು ಕುರಿತು...

ಇದೊಂದು ಪ್ರಯೋಗ, ವರ್ಷವೊಂದರಲ್ಲಿ ಕವಿತೆಯ ಆಗುಹೋಗುಗಳನ್ನು ಕವಿತೆಯ ಮೂಲಕ ನಮ್ಮ ಸುತ್ತಲ ಜಗತ್ತನ್ನು ನೋಡುವ ಪ್ರಯತ್ನ. ಇಲ್ಲಿನ ಕವಿತೆಗಳನ್ನು ಬೇರೆ ಬೇರೆ ಪತ್ರಿಕೆ, ನಿಯತಕಾಲಿಕೆಗಳಿಂದ ಆರಿಸಿಕೊಂಡು, ಒಂದೆಡೆ ಪೋಣಿಸಲಾಗಿದೆ. ನಾವು ಗುಡ್ಡೆ ಹಾಕಿಕೊಂಡ ನೂರಾರು ಕವಿತೆಗಳ ಪೈಕಿ ನಮ್ಮನ್ನು ತಾಕಬಲ್ಲವು ಕೆಲವು ಮಾತ್ರ ಇಲ್ಲಿ ಉಳಿದುಕೊಂಡಿವೆ. ಹಾಗೆಂದ ಮಾತ್ರಕ್ಕೆ ನಾವು ಆರಿಸಿರುವುದೇ ಶ್ರೇಷ್ಠ ಎಂದೇನೂ ಭಾವಿಸಿಲ್ಲ, ಕವಿತೆಗಳು ಕವಿತೆಗಳಾಗಿ ಹೇಗೆ ಕಾಣಬಹುದು ಎಂದಷ್ಟೇ ನೋಡಲಾಗಿದೆ. ಇದಕ್ಕೆ ನಮ್ಮ ಮಿತಿಗಳೂ ಸಾಕಷ್ಟಿವೆ. ಬಹುಮುಖ್ಯವಾಗಿ ಗಾತ್ರದ್ದು. ಇದು ಪ್ರಾತಿನಿಧಿಕ ಆಂಥಾಲಜಿ ಏನಲ್ಲ, ಆದರೆ ನದಿಯ ಎಲ್ಲ ಗುಣಗಳನ್ನೂ ಹೊತ್ತ ಬೊಗಸೆಯೊಳಗಿನ ನೀರಿದು. ನೆನಪು ಮತ್ತು ವರ್ತಮಾನ ಜೊತೆಗೂಡಿದ್ದು. ಸಾಹಿತ್ಯ ಪತ್ರಿಕೆಯೊಂದು ಮಾಡಬಹುದಾದ ಪ್ರಯೋಗವಿದು.

ಈ ಸಂಚಿಕೆಯನ್ನು ರೂಪಿಸುವಲ್ಲಿ ಇಬ್ಬರು ಗೆಳೆಯರು ನನ್ನ ನೆರವಿಗೆ ನಿಂತಿದ್ದಾರೆ. ಮೈಸೂರಿನ ಎಸ್. ಸುಧೀಂದ್ರಕುಮಾರ್ ಕವಿತೆಗಳ ಮೊದಲ ಸುತ್ತಿನ ಸಂಗ್ರಹ, ಆಯ್ಕೆಗೆ ನೆರವು ನೀಡಿದರೆ, ಅರಸೀಕೆರೆಯ ಡಿ.ಎಸ್. ರಾಮಸ್ವಾಮಿ ನಂತರದ ಹಂತದ ಶೋಧನೆಗೆ ನೆರವಾಗಿದ್ದಾರೆ. ಜೊತೆಗೆ ೨೦೦೯ರ ಸಾಹಿತ್ಯ ಸ್ಪರ್ಧೆಯ ಕವಿತೆಗಳ ಆಯ್ಕೆಗೂ ಇವರಿಬ್ಬರ ನೆರವಿದೆ. ಅವರಿಗೆ ಕೃತಜ್ಞತೆಗಳು. ಈ ಸಂಚಿಕೆಯ ಕಲ್ಪನೆ ಕೊಟ್ಟ ಚ.ಹ. ರಘುನಾಥ, ಪ್ರಜಾವಾಣಿ, ವಿಜಯ ಕರ್ನಾಟಕ, ಉದಯವಾಣಿ, ಕನ್ನಡಪ್ರಭ, ಮಯೂರ, ಓ ಮನಸೆ, ನಮ್ಮ ಮಾನಸ ಮೊದಲಾದ ಪತ್ರಿಕೆಗಳ ಸಂಪಾದಕರನ್ನು ಇಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಈ ಸಂಚಿಕೆಗೆ ತಮ್ಮ ಕವಿತೆಗಳನ್ನು ಸೇರಿಸಲು ಒಪ್ಪಿದ ಎಲ್ಲಾ ಕವಿಗಳಿಗೂ ವಂದನೆ.

ಇಲ್ಲಿನ ಕವಿತೆಗಳು ಒಂದು ಮುಕ್ತ ಓದಿನ ಅನುಭವ ನೀಡುತ್ತವೆ. ಅವುಗಳ ತಲೆಬರಹದ ಅಕಾರಾದಿಯಲ್ಲಿದೆ, ಕವಿಗಳ ಹೆಸರು ಕವಿತೆಗಳ ಜೊತೆಗಿಲ್ಲ ಕವಿಗಳ ಹೆಸರಿನ ಪ್ರಭಾವಳಿಗೆ ಕವಿತೆಗಳ ಓದು ಸಿಕ್ಕಬಾರದೆನ್ನುವುದು ನಮ್ಮ ಉದ್ದಿಶ್ಯ.

ಒಪ್ಪಿಸಿಕೊಳ್ಳಿ, ಈ ಹೊತ್ತಿನ ಕವಿತೆಗಳನ್ನು...

ನಿಮ್ಮ

ಸಂಪಾದಕ

ಅಚ್ಚರಿ ಅಲ್ಲದಿನ್ನೇನು ಅದು!

ಲೆಕ್ಕಣಿಕೆಯಿಂದ ಉದುರಿದ ಅಕ್ಷರ ಗುಂಪು ಕೆಲವು
ಆಕಸ್ಮಿಕ ಊಟೆ ಹಲವು ಮೀಟಿ
ಅಕ್ಷರದ ಕವಿತೆಯಾಗಿಬಿಡುತ್ತವಲ್ಲ,
ಅಚ್ಚರಿ ಎಂದರೆ ಅದು.

ಅಕ್ಷರಗಳನ್ನೇ ಕಟ್ಟಿಕೊಂಡ ನಿಟ್ಟುಸಿರು ಕೆಲವು
ಬರೆದವನೇ ಅರಿಯದಂತೆ
ಬೆಚ್ಚನೆಯ ಹೃದಯ ಇನ್ನಾವುದಕ್ಕೋ
ಮುಟ್ಟಿಬಿಡುತ್ತವಲ್ಲ,
ಅಚ್ಚರಿ ಎಂದರೆ ಅದು.

ಬರೆದ ಕೈ ಗೋರಿಯಾಗಿ, ಬರಿದೆ ಮಣ್ಣ ಹುಡಿಯಾಗಿ
ಬರಹದ ಪೂರ್ಣ ಪರೀಜು ಗೆದ್ದಲು ಗುಂಪಾದರೂ
ಬೇರೆ ನೆಲದಲ್ಲೆಲ್ಲೋ ಪರಭಾರೆ ಬೇರು ಬಿಟ್ಟಿರುತ್ತವಲ್ಲ,
ಅಚ್ಚರಿ ಎಂದರೆ ಅದು.

ಜಕ್ಕಣಸುತ ತೋರಿದ ಕಪ್ಪು ಕಲ್ಲಾಳದಲಿ
ಬೆಚ್ಚನೆ ಕೂತ ಕಪ್ಪೆ ಉಸುಕು ಮುಕ್ಕು ನೀರುಗಳಂತೆ
ಜೀವ ನಿರಂತರತೆ ಇಂತಹದು ಹರಿದೇ ಇರುತ್ತದಲ್ಲ,
ಅಚ್ಚರಿ ಅಲ್ಲದಿನ್ನೇನು ಅದು.

■

ಅಪ್ಪ

ಅಪ್ಪ ನನ್ನ ಹತ್ತಿರ ಮರೆತ
ಸೀಳಿದ ಚಾಳೀಸು
ಶೋಕೇಸಿನಲಿ ಕೂತು
ನನ್ನನೇ ದುರುಗುಟ್ಟುವುದು

ಎರಡು ಗೋಲದ ಕನ್ನಡಿ
ಬಂಧಿತ ಫ್ರೇಮಿನಲಿ
ಮೆಲ್ಲಗೆ ರೆಪ್ಪೆ ಬಡಿಯುವುದು

ಕಪ್ಪು ಗುಡ್ಡೆಗಳು ಆ-ಈ ಬದಿ ಸರಿದಾಡಿ
ನನ್ನ ಬೆನ್ನಲ್ಲೇ ಸ್ತಬ್ಧವಾಗುವುದು
ಕಚ್ಚೆ ಪಂಚೆಯ ನಿರಿಗೆ ಹಿಡಿದ ಬೆರಳು

ತೊಟ್ಟ ತನ್ನದೇ ಇನಿಷಿಯಲ್ ಜಿ ಅಕ್ಷರದುಂಗುರ
ಮುಂಗಾಲಲ್ಲೆದ್ದು ಕಾಣುವ ಹಸಿರು ನರ
ನನ್ನ ತುಂಬಿಕೊಳ್ಳುವುದು

ಮಸಿಬಟ್ಟೆಗೆಂದು ಬಿಸಾಡಿ ಹೋದ
ಗೋಲ ಹರಿದ ಬನಿಯನ್ನು ಅಪ್ಪನೇ
ತಂದುಕೊಟ್ಟ ದೋಸೆ ಎಬ್ಬಿಸುವ ಸೌಟು

ವಿಕ್ಸ್ ವೆಪರಬ್ ಡಬ್ಬ
ಸಣ್ಣ ಸೂಜಿ ಬಿಳೀ ನೂಲಿನುಂಡೆ
ನನ್ನ ಬಳಿ ಮಾತಿಗೆ ನಿಲ್ಲುವುದು

ಚಾಳೀಸಿನ ಮಸೂರದಿಂದ
ಒಂದೊಂದು ಕಿರಣ
ಛಿದ್ರ ಗಾಜಿನ ಮೈ ತುಂಬ

ಚಿತ್ರ ವಿಚಿತ್ರ ವರ್ಣ
ಅಪ್ಪ ಚಾಳೀಸಿನೊಳಗೆ
ಚಾಳೀಸು ನನ್ನೊಳಗೆ.

ಅಳತೆ

ಹಿಂದೆಂದೋ ರಾಮಾನುಜನ್ ಪರಿಚಯಿಸಿದ್ದ
ಆ ಅದೇ ಅಂಗುಲದ ಹುಳು
ಮೊನ್ನೆ ಮಾರ್ಕೆಟ್ಟಲ್ಲಿ ಅಚಾನಕ್ಕಾಗಿ ಸಿಕ್ಕು
ಉಭಯ ಕುಶಲೋಪರಿ ಕೇಳಿತು;

ಗುಬ್ಬಚ್ಚಿಯ ಬಾಲ, ಮುದಿ ಗೂಬೆಯ ಹೊಟ್ಟೆ
ಹಂಸದ ಕತ್ತು, ಹಾಗೇ ಹಾಲಕ್ಕಿಯ ಮೂಗು
ಕೊಕ್ಕರೆಯಂತೇ ಇದ್ದ ಇನ್ನ್ಯಾರದೋ ತೆಳ್ಳನೆಯ ಕಾಲು,
ಉದ್ದವಾಗುವ ನಾಲಿಗೆ, ಕುಕ್ಕುವ ಕೊಕ್ಕು,
ಯೋನಿ ಲಿಂಗಗಳನ್ನಳೆಯುವಾಗಲೂ ಸಂತ-
ನಂತಿದ್ದೂ, ಹಾಡನ್ನಳೆಯುವ ನೆವದಲ್ಲಲೆದೂ ಅಲೆದೂ
ಸವೆದಿರುವ ತನ್ನ ಅಳತೆಯ ಪಟ್ಟಿ –
ಗೆ ಪ್ರಮಾಣ ಪತ್ರ ಕೊಟ್ಟವರ ಪಟ್ಟಿ ಬಿಡಿಸಿಟ್ಟಿತು.

ಹಾಗೇ ಗಾಂಧಿ, ಬುದ್ಧ, ಬಸವ, ಏಸು
ಕನಕ ಪುರಂದರರ ಜೊತೆಗೇ ಬೆರೆವ
ಅದೆಷ್ಟೆಷ್ಟೋ ಹೆಸರುಗಳನುದ್ಧರಿಸಿತು.
ನಿಖರವಾಗದವರಳತೆಗೆ ಸೋತೆನೆಂದಿತು.

ಇಷ್ಟಿಷ್ಟೇ ಎಂದು ತುಂಬಿಸಿಕೊಂಡಿದ್ದ ಕೈಯ ಚೀಲ
ಭಾರವೆನ್ನಿಸಿ ಕೈ ಬದಲಿಸಲು ದೃಷ್ಟಿ ಬದಲಿಸಿದೆ.

ಆ ಹುಳು ಮತ್ತೆಲ್ಲೋ ಮರೆಯಾಗಿಹೋಯಿತು!

■

ಅಸ್ತಮಾನದ ಪದ್ಯಗಳು

೧

ಮರುಜನ್ಮ
ಇಲ್ಲವೆಂದೇ ವಾದಿಸುತ್ತಿದ್ದೆ
ಆತ ಮಾತ್ರ
ಪ್ರತಿದಿನವೂ ಹುಟ್ಟುತ್ತಿದ್ದ

೨

ಹಗಲಿಡೀ
ಸತ್ಯಶೋಧಕನಂತೆ
ಹೊಳೆಯುತ್ತಿದ್ದ
ಉಜ್ವಲ ಬೆಳಕ ಚೆಲ್ಲಿ;
ಕೊನೆಗೊಮ್ಮೆ
ಹೊರಟುಹೋದ
ಲೋಕವನ್ನೆ
ಕತ್ತಲೆ ಕೂಪಕ್ಕೆ ತಳ್ಳಿ!

೩

ಸಹಿಸಲು ಸಾಧ್ಯವೇ
ಇಲ್ಲ ನಮಗೆ
ಕಡು ಬೇಸಗೆಯ
ಬಿಸಿಲ ಧಗೆ;
ಉರಿವ ಸೂರ್ಯ ತಾನೆ
ಇಳಿದಿದ್ದಾನೆ

ಸೆಖೆ ಸಹಿಸಲಾರದೆ
ಸಾಗರದೊಳಗೆ!

೪

ಜಗದಗಲ
ಅಲೆದಾಡಿದರೂ
ಸಿಗಲಿಲ್ಲ – ಸಂಗಾತಿ
ಕೊನೆಗೂ
ಸೂರ್ಯ ಏಕಾಂಗಿ;
ಅದಕ್ಕೇ
ಅವನೀಗ
ಕಾವಿಧರಿಸಿ– ಸನ್ಯಾಸಿ
ಎತ್ತಲೋ
ನಡೆದಿದ್ದಾನೆ ವೇಷ ಮರೆಸಿ

೫

ಮುಸ್ಸಂಜೆ
ಸಮುದ್ರ ಸ್ನಾನಕ್ಕಿಳಿದವನು
ಮರಳಿಲ್ಲ ಕತ್ತಲಾದರೂ;
ಹೋಗಿ, ದಡ ಸೇರಿಸಿ
ಯಾರಾದರೂ
ಇಲ್ಲವಾದರೆ ನಾಳೆ
ಬೆಳಗಾಗುವುದು ಹೇಗೆ?

೬

ಮುಳುಗಿದ ಸೂರ್ಯನಿಗಾಗಿ
ಮರುಗುವಿರೇಕೆ ನೀವು?
ಹಗಲಿಡೀ
ನಮ್ಮ ಸುಟ್ಟವನನ್ನು
ಕಡಲಿಗೆಸೆದಿದ್ದೇವೆ
ನಾವು!

■

ಅಮ್ಮನಾಗುವುದೆಂದರೆ...

ಒಲೆಯ ಮೇಲೆ
ಬೆಣ್ಣೆ ಕಾಯಿಸಲು ಪಾತ್ರೆ ಇಟ್ಟಾಗೆಲ್ಲಾ
ಅಮ್ಮನ ಮಾತಿನ ನೆನಪು
ಎಚ್ಚರಿಕೆಯ ಉಪದೇಶದ ಮೆಲುಕು.

''ಮಗಳೇ, ಬೆಣ್ಣೆ ಮುದ್ದೆಯ ಮೂರರಷ್ಟು
ದೊಡ್ಡ ಪಾತ್ರೆಯಲಿ ಕಾಯಲಿಡಬೇಕು
ಬೆಂಕಿ ಕೊಟ್ಟರೆ ಬೆಣ್ಣೆ ಉಕ್ಕುತ್ತದೆ
ತನ್ಮಯತೆಯಲಿ ಕಾಯಬೇಕು.

ಬೆಣ್ಣೆ ಹದ ಬೆಂದರಷ್ಟೇ
ಪಕ್ವಗೊಂಡ ತುಪ್ಪ
ಹೆಚ್ಚು ಕಾದರೆ ಸೀಕಲು
ಕಡಿಮೆ ಬೆಂದರೆ ಹಸುಕಲು

ಬೆಣ್ಣೆ ಕಾದು ತುಪ್ಪ ಪಕ್ವಗೊಳ್ಳುವಾಗ
ಕ್ಷೀಣಿಸುವ ಮಟರ್ ಮಟರ್ ಸದ್ದು
ಜಡಿ ಮಳೆ ನಿಲ್ಲುತ್ತ ಬಂದಂತೆ
ಹದ ತುಪ್ಪದ ಘಮಲು ಎಲ್ಲೆಡೆಗೂ''

ಅದೆಷ್ಟು ಬಾರಿ ಒಬ್ಬಳೇ
ಬೆಣ್ಣೆ ಕಾಯಿಸಿದ್ದೋ ಲೆಕ್ಕವಿಲ್ಲ
ಆ ಪಿತ್ತ ಈ ಚಿತ್ತದ ಗಡಿಬಿಡಿಯಲ್ಲಿ
ಗಮನವೀಯದೆ ಉಕ್ಕಿಸಿದ್ದೇ ಹೆಚ್ಚು

ಉಳಿದು ಕಾದದ್ದು ಒಮ್ಮೆ ತುಪ್ಪ ಸೀದು
ಮೂಗಿಗಮರುವ ಕಮಟು ವಾಸನೆ
ಇನ್ನೊಮ್ಮೆ ಹಸಿಹಸಿಯಲೇ ಇಳಿಸಿ
ನಾಲ್ಕೇ ದಿನಕ್ಕೆ ಕೆಟ್ಟ ನಾತ.

ಯಾವುದು ನಿಜದ ಹದ?
ಪಕ್ವತೆಯ ಗರಿಷ್ಠ ಬಿಂದು?
ನಿರ್ಧಾರದ ಹೊಸ್ತಿಲಲ್ಲಿ ತಪಿಸುವ ತಾಪ
ಮಾಗುವಿಕೆಯ ಹುಡುಕಾಟದ ತಪ.

ಸಿದ್ಧಿಸಿದಂತೆಲ್ಲಾ, ಬೆಣ್ಣೆ ಉಕ್ಕುವುದಿಲ್ಲ
ಮಟರ್ ಮಟರ್ ಸದ್ದಿಗೆ ಧ್ಯಾನಿಸಿ
ಸ್ಥಿರಗೊಳ್ಳುತ್ತದೆ ಮನ. ಕರಟುವುದಿಲ್ಲ,
ಹಸುಕಲಾಗುವುದಿಲ್ಲ ಸದಾ ಹದ ತುಪ್ಪ
ಅಮ್ಮನಾಗುವುದೆಂದರೆ... ಹೀಗೆ.

■

ಆ ಅಳು ಈಗಲೂ ಅಲ್ಲಿ

ಆ ಅಳು ಈಗಲೂ ಅಲ್ಲಿ
ಪಾಟಿಯ ಮೇಲೆ ಅ ಆ ಇ ಈ ತೊದಲು ನುಡಿವ
ಮಗುವಿನ ಮುಪ್ಪಿನ ಸಂಕೇತಗಳಂತೆ
ಮಾನವ ಕುಲದ ಪ್ರಾಥಮಿಕ ಕಲಿಕೆಯಾಗಿ
ಮುಗ್ಧವಾಗಿ ಮಾದಕವಾಗಿ ಕರುಣಾಜನಕವಾಗಿ
ಭಯಾನಕವಾಗಿ
ಆ ಅಳು ಈಗಲೂ ಅಲ್ಲಿ
ಆ ಶ್ವೇತ ಕರವಸ್ತ್ರದಲ್ಲಿ
ಮೆರವಣಿಗೆ ಹೊರಟ ಕಾಲುಗಳ ಚಲನೆಯಲ್ಲಿ

ಬೇಕಾದರೆ
ಅಪ್ಪನಿಗಾದರೂ ಹೇಳಬಹುದು
ಅಮ್ಮನಿಗಾದರೂ ಕೇಳಬಹುದು
ದೇವರಿಗೇ ದಬಾಯಿಸಬಹುದು

ಆ ಅಳು
ನಾಗರಿಕತೆಯ ಬೆಂಕಿಯೊಂದಿಗೆ ಹುಟ್ಟಿದಂತಿದೆ
ಎಷ್ಟೊಂದು ಪ್ರವಾಹ ಬಿರುಗಾಳಿಗಳ ಹಾದು ಬಂದಿದೆ
ರಹಸ್ಯಕ್ಕೆ ಚಿಪ್ಪೊಡೆದು ರಹಸ್ಯ ಸಂಭವಿಸುವ ಹಾಗೆ
ಆ ಅಳು ಈಗಲೂ ಅಲ್ಲಿ
ಪುರಾತನ ವೃಕ್ಷದ ಬೀಜದೊಳಗೆ

ಇಮಾರತು ನಡುಗುವ ಹಕ್ಕಿಯ ಹಿಕ್ಕೆಯಾಗಿ

ಜಗತ್ತಿಗೆ ಕಾಲಿಟ್ಟ ತಕ್ಷಣವೇ
ಬೋರ್‍ಯಾಡಿ ಅಳುವ ಈ ಎಳೆಯ ಪ್ರೇತ ಮತ್ತೆ
ನೆಲೆಯಿಲ್ಲದೆ
ಅಲೆಮಾರಿಯಾಗಿ ಕಳೆದುಹೋಗುವ ಮುನ್ನ
ಸಾವಿರ ಕಣ್ಣುಗಳ ಅಳುವಿನ ಮುಖ ನೆನಪಾಗುವುದು

ಅಳುವಿನ ಧ್ಯಾನ
ಒಣಗಿದ ಹಲ್ಲಿಯ ಗೋಡೆ ಮಾತುಗಳಂತೆ
ರಾತ್ರಿಗಳ ಸುಟ್ಟು ಲೇಪಿಸಿಕೊಂಡ ಗಂಧವಾಗುತ್ತದೆ
ಮತ್ತೊಂದು ಸೂರ್ಯೋದಯಕ್ಕೆ ಸಜ್ಜಾಗುತ್ತದೆ

ದೇವರು ದೊಡ್ಡವನು
ನಿತ್ಯದ ನೀರಸದಲ್ಲೂ ನಮಗೆ ಗೊತ್ತಿಲ್ಲದಂತೆ ಆಗಾಗ
ಬಹುಮಾನಗಳನ್ನಿಟ್ಟಿರುತ್ತಾನೆ
ಆ ಅಳು ಆಲಿಸಲು ಕೆಲವೊಬ್ಬರಿಗಾದರೂ
ಕಿವಿಗಳನ್ನು ಕೊಟ್ಟಿರುತ್ತಾನೆ.

ಆಕಾಶದ ನಗು

ಆಕಾಶಕ್ಕೆ ಚೌಕಟ್ಟು ಹಾಕಿದರೆ
ಬಾಗಿಲು
ಬಿಚ್ಚಿಕೊಂಡರೆ ಬಯಲು
ಮುಚ್ಚಿದ ಬಯಲೊಳಗೆ
ಮನೆ-ಮಠ
ಮಂದಿರದ ಮಸೀದಿಗಳ ಹುಯಿಲು

ನಿತ್ಯ ಮನೆ ಆಫೀಸುಗಳ
ಒಳಹೊಕ್ಕ ಜನ
ತಾವೇ ಒಂದೊಂದು ಚೌಕಟ್ಟಾಗಿ
ಕೀಲಿ ಹಾಕಿಕೊಂಡು ಭದ್ರ
ಗಾಳಿ ಪಿಡುಗುಡುವದ ನಿಲ್ಲಿಸಿ
ಪರಿಮಳ ಛಿದ್ರಛಿದ್ರ

ಮನದ ಕೋಟೆಯೊಳಗೆ
ಸಂಚು ಪಿತೂರಿಗಳು ಹೊಸೆದು
ಕ್ಷಣಗಣಿಸುತ್ತದೆ ಬಾಂಬು
ಸ್ಫೋಟಗೊಳ್ಳಲು
ಹೊರಗೆ,
ಕ್ಲೋಸಪ್ಪು ನಗೆ ಕಾವಲು.

ಬಯಲಲ್ಲಿ ಚುನವಣಾ ಭಾಷಣ
ಧರ್ಮ ಜಾಗೃತಿ ಸಭೆ
ಸೈದ್ಧಾಂತಿಕ ಹೋರಾಟಗಳ ಧಗೆ

ಬಣ್ಣ ಬಳಿದುಕೊಂಡು ಕಂಗೊಳಿಸುತ್ತ
ಚೌಕಟ್ಟುಗಳು
ಗಿರಾಕಿಗಳ ಸೆಳೆಯುತ್ತಿವೆ!

ಒಳ ಹೋದವರ ದಾರಿ ಕಳೆದಿದೆ
ಹೊರನಿಂತವರ ಕೀಲಿ ಕಳೆದಿದೆ
ಸಾವಿರ ಸುನಾಮಿ ಅಪ್ಪಳಿಸಿದರೂ
ಭಗ್ನವಾಗದ ಚೌಕಟ್ಟು
ಅಣಕಿಸುತಿದೆ ಆಕಾಶವನೇ
ಚಿತ್ರವಿಚಿತ್ರ ಆಕಾರ ತಳೆದು,

ನಿರಾಕಾರಿ ಆಕಾಶ
ನಕ್ಕು ಸುಮ್ಮನಾಗಿದೆ.

■

ಇರುವುದನ್ನು ಸಾಬೀತು ಪಡಿಸುವುದು ಹೇಗೆ?

(ಬುದ್ಧನಿಂದ ಬಸುರಾಗಿರುವುದಾಗಿ ಹುಯಿಲೆಬ್ಬಿಸಿದವಳ ಹೊಟ್ಟೆಯ ಬಟ್ಟೆ ಗಂಟನ್ನು ಬಂದ ಇಲಿಯಾಗಿ ಕಡಿದು ಸುಳ್ಳನ್ನು ಬಯಲು ಮಾಡಿದನಂತೆ)

ಕಳಚಿ ಬೀಳುವುದು ಇಲಿ ಕಡಿದ
ನಾರು ಮಡಿಗಂಟಿನ ಹಾಗೆ ಸಾಕ್ಷಿಗಳು
ತೋರುವುದು ನಿಜ ಅವಳ ಒಡೆದ ಹುಣ್ಣಿನ ಹಾಗೆ
ಬೆಳಗುವುದು ಬುದ್ಧ ಗುರುವೆಂಬ ತಾಯಿಯ ಹಾಗೆ

ಗಂಡಸೆಂದೇ ಬಗೆದಳು ಬೆಳಕಿನ ದೇಹಿಯನ್ನು
ಕಂಡಿತ್ತು ಹಾಗೇ ಅವರ ನಡುವಿನ ಅವನ
ಸರಿದಾಟಗಳು; ಪ್ರಿಯ ಶಿಷ್ಯರಿಗೂ
ತುಸುವೇ ಸಂದೇಹವಿತ್ತು

ಬೊಟ್ಟು ಮಾಡಿ ಜರೆದಳು ಕಣ್ಣೀರುಗರೆದಳು
ಭಾರವಾಗುತ್ತಿತ್ತು ಸಂಜೆ ಬೆಳಕು
ನಿಜವೇನೆಂಬುದು ಗೊತ್ತು ನನಗು ನಿನಗೂ
ಇರುವುದನ್ನು ಹೇಗೆ ಸಾಬೀತು ಪಡಿಸುವುದು?

ಸಮರ್ಥನೆ ಪುರಾವೆ ವಾದಗಳ ಮಂಡಿಸದೆ
ಧರಿಸಿ ನಿಂತನು ಆ ಮುಳ್ಳುಮಾಲೆ
ಅದೊಂದು ಪವಾಡದಂತೆ
ಅವನ ಮುಟ್ಟಿದ್ದೇ ಮುಳ್ಳುಗಳು ಮಿದುವಾಗಿ
ಸುಳ್ಳುಗಳು ಇಲ್ಲವಾಗಿ

ತೇಲಿದವು ಎಲ್ಲವೂ
ಬೆಳಕು ಕರಗಿರುವ ಹೊಳೆಯಲ್ಲಿ

ಎಲ್ಲೋ

ಎಲ್ಲಿಂದಲೋ ಪಾಲಿಥಿನ್‌ನಲ್ಲಿ ಸೀಲಾಗಿ
ಬಂದ ಒಂದು ಬೊಗಸೆ
ಹಸಿಮಣ್ಣನ್ನು ಬಿಳಿ ಹಾಳೆಯ ಮೇಲೆ ಹರಡಿ
ಪರ್ಫ್ಯೂಮ್ ಸಿಂಪಡಿಸಿ
ಟಿಕೆಟ್ ಕೊಟ್ಟು
ಮಣ್ಣಿನ ವಾಸನೆ ಆಸ್ವಾದಿಸಲು ಬಿಟ್ಟಿದ್ದಾರೆ

ಈ ಮಣ್ಣಿನ ವಾಸನೆ ಹೀರಿ
ನೂರಾರು ಜನ ಕವಿತೆ ಬರೆದಿದ್ದಾರೆ
ಚಿತ್ರ ಬಿಡಿಸಿದ್ದಾರೆ, ಸಿನಿಮಾ ಮಾಡಿದ್ದಾರೆ

ಆದರೆ ಈ ಮಣ್ಣಲ್ಲಿ ಹಾಕಿದ
ಯಾವ ಬೀಜವೂ
ಇದುವರೆಗೆ ಮೊಳೆತಿಲ್ಲ

ಈಗ ಮಣ್ಣು ಬಂಜರೋ
ಬೀಜ ಜೊಳ್ಳೋ
ಎಂದು ಕವಿಗಳು ಯೋಚಿಸುತ್ತಿದ್ದಾರೆ.

■

ಒಂದು ದೇವತಾ ಸ್ತುತಿ

ಕಳೆದ ಸುರಿಮಳೆಯಲ್ಲೂ ಹಿಂದಿನ ಎಳೆಬಿಸಿಲಲ್ಲೂ
ಅದಕೂ ಹಿಂದೆ ಮುಸುಕಿದ್ದ ಮಂಜಲ್ಲೂ ಹೀಗೇ
ನಡೆಯುತ್ತಿದ್ದವಳು ನೀನು
ನನಗೆ ಮಾತ್ರ ಗೊತ್ತಿರಲಿಲ್ಲ
ನಿನ್ನ ಪಾದಗಳ ಸದ್ದು ಕೇಳಿರಲಿಲ್ಲ
ನೀನು ಅಷ್ಟು ಅನ್ಯಮನಸ್ಕೆ.
ಕೋಟೆಕೊತ್ತಲ ದೇಗುಲ ಹಸಿರು ಎಳೆಬಿಸಿಲ ನಡುವೆ
ಸುಳಿದು ಹೋಗುತ್ತಿದ್ದ ದೇವತಾ ಸಂಭೂತೆ.

ಮರಣವು ಬಂದರೆ ಬರಲಿ ನಿನ್ನ ಪಾದದ ಕೆಳಗೆ
ಸುಖವೆಂಬುದು ನಿನ್ನ ಮುಚ್ಚಿದ ಕಣ್ಣುಗಳು
ನಿನಗಾಗಿ ಹೊಡೆದಾಡಿ ಮಡಿದ ಪಾಪಿಗಳು
ಅರಿಯಲಿಲ್ಲ ನಿನ್ನ ಕಣ್ಣ ಬೆಳಕು
ದೇವತೆಯೇ ಅರಿಯಲಿಲ್ಲ ಯಾರೂ
ಈ ಶಹರಿನಲ್ಲಿ ಕಳೆದ ಮಳೆ ಬಿಸಿಲು ಅದಕೂ ಹಿಂದಿನ ಹಿಮಪಾತಗಳಲ್ಲಿ
ನೀ ಬಾಲಕಿಯಂತೆ ನಡೆಯುತ್ತಿದ್ದುದು
ನಿನ್ನ ಕಣ್ಣುಗಳು ಹೊಳೆಯುತ್ತಿದ್ದುದು.

ಯಾವ ಕಾರಣವೂ ಇಲ್ಲದೆ ಹೊಳೆಯುತ್ತಲೇ ಇರುವುದು ಹೇಗೆ
ನಿನ್ನ ಕಣ್ಣುಗಳ ಹಾಗೆ. ಏನೂ ಇಲ್ಲದ ಕಾರುಣ್ಯ, ಕೊನೆಯುವರೆಗೆ
ಹಾದಿ ತಿರುವಿನಲ್ಲೂ ಉಳಿವ ಬೆಳಕು, ಇರುಳು ಕಾರಣವಿಲ್ಲದೆಯೇ
ಕೇಳುವ ಅಳು, ನಿನ್ನ ಪಾದಗಳಲ್ಲದೇ ಬೇರೇನು ಬೇಡುವುದು ಹೇಗೆ?

ಮರಣವು ಬಂದರೆ ಬರಲಿ ನಿನ್ನ ಪಾದದ ಕೆಳಗೆ.
ಒಂದು ಇರುಳು ನೀನೊಂದು ತಾರೆಯ ತೋರಿದೆ
ಒಂದು ಹಗಲು ಲಾವಾರಸವೊಂದು ಬೆರಳುಗಳ ಸುಡದಂತೆ ನಡೆಸಿದೆ
ಇನ್ನೊಂದು ಬೆಳಗು ಶಕುನಗಳ ಬಿಡಿಸಿ ಹೇಳಿದೆ
ನಿನ್ನ ಕದಪಿನ ಬಣ್ಣಗಳ ಹಾಗೇ ಉಳಿಸಿ ಬಾಚಿ ಮುದ್ದಿಟ್ಟೆ
ಇವೆಲ್ಲವೂ ನಿನ್ನದೇ ಅಂದೆ.

ಹೇಳು ಎಲ್ಲಿದ್ದೇ?
ಕಳೆದ ಸುರಿಮಳೆಯಲ್ಲೊ, ಹಿಂದಿನ ಎಳೆಬಿಸಿಲಲ್ಲೊ
ಅದಕೂ ಹಿಂದೆ ಮುಸುಕಿದ್ದ ಮಂಜಲ್ಲೊ
ಒದ್ದೆ ಒದ್ದೆ ನಡೆಯುತ್ತಿದ್ದವಳು
ನನ್ನ ಪ್ರಾಯದ ದಿನಗಳಲ್ಲಿ ಎಲ್ಲಿದ್ದೆ?
ಇದ್ದಿದ್ದರೂ ಹೀಗೇ ಪೂಜಿಸುತ್ತಿದ್ದೆ.

ಒಂದು ಮಾತು ಹೇಳಿ ಹೋಗು

ಸಂಜೆ ಜಗುಲಿಯ ಮೇಲೆ
ನಡೆದೇ ಇತ್ತು ನಿಮ್ಮ ಮಾತುಕತೆ
ನಾರಣಪ್ಪನೋ ಲಕ್ಷ್ಮೀಶನೋ ಅಥವಾ
ಇಬ್ಬರೂ ನಿನ್ನೊಳಗೇ ಕಲಸಿದಂತೆ
ಕಾಣಲೆಂದು ಕರೆದಂತೆ ಭಾಸವಾಗಿ
ಹೊರಬಂದರೆ ಖಾಲಿ ಜಗಲಿಯಲಿ ವ್ಯಾಸಪೀಠ
ನೀನಾದರೂ ನನಗೊಂದು ಮಾತು ಹೇಳದೆ ಹೋದೆ

ಇಂದು ದುರ್ಗಾಷ್ಟಮಿ
ನಿನ್ನ ಗೆಳೆಯ ಅವಧೂತ ಚಿದಾನಂದ ಬರುವನೆಂದು
ದೇವಿ ಪುರಾಣದ ಬಾಗಿಲು ತೆರೆದೆ
ನಿಮ್ಮಿಬ್ಬರದು ಅದೇನು ತಾರಾಟ
ಹೀಗೆ ಜೀವಮಾತ್ರರು ನುಡಿದಾಕ್ಷಣ
ದೇವಿ ನುಡಿದದ್ದು ಮೊದಲು ಕಂಡೆ
ಕೇಳಿಸಿಕೊಂಡೇನೆಂದರೆ ನನಗೊಂದು ಮಾತು
ಹೇಳದೆ ಹೋದೆ.

ಸ್ವಲ್ಪ ಹೊತ್ತಿಗೆ ಮುಂಚೆ
ಮತ್ತದೇ ದುಃಖಕ್ಕೆ ನಿಮಿತ್ತ ಕೇಳಲೆಂದು
ಬಂದ ಊರಬಾಗಿಲು ಹನುಮಂತಣ್ಣ
ಕುಳಿತಿರುವ ದಿಕ್ಕು ಹೇಳಿದ ಕುಸುಮ
ಒಂಟಿಕೊಪ್ಪಲಿನ ಪಂಚಾಂಗಕರ್ತ- ಎಲ್ಲರನೂ
ಹಿಡಿಯಲ್ಲಿ ಹಿಡಿದು ಆಡಿಸುತ್ತಿದ್ದೆ
ಈಗ ಕವಡೆಗಳೆಲ್ಲ ಕೂತು ಮಾತಾಡುತ್ತಿವೆ
ನೀನು ಮಾತ್ರ ನನಗೊಂದು ಮಾತು ಹೇಳದೆ ಹೋದೆ

ದೂರದಿಂದ ಬಂದ ಮರಾಲೆಯ ಮುಡಿಸಿ
ದೊಡ್ಡಮ್ಮನ ಮುಖಪದ್ಮಕ್ಕೆ ಕುಂಕುಮವ ಲೇಪಿಸಿದ್ದೆ
ಉರುಮೆಯ ಜನರ ದೋಣಿನ ಚಿನ್ನ
ಮುಖವೀಣೆ ಮಾರಣ್ಣನ ಗಾನದ ಮತ್ತು
ಗತ್ತುಗಳೆಲ್ಲ ನಡೆವ ಹೊತ್ತು
ಮಾರುವ ಮೊದಲೇ ಪೂಜೆಯ ಇಳುವಿ ಹೋದೆ
ಹೋಗುವ ಮುನ್ನ ನನಗೊಂದು ಮಾತು ಹೇಳದೆ ಹೋದೆ

ಈಗ ನುಡಿಯ ಕಟ್ಟುವ ಹಠಕ್ಕೆ ಬಿದ್ದು
ನಿನ್ನ ವಿದಾಯವನ್ನೇ ಧ್ಯಾನಿಸುತಿರುವೆ
ನಿನ್ನ ಮಾತು ಕವನವಾಗಿ ಕೇಳಲು
ಜೀವ ಏಕ ಮಾಡಿ ಕುಳಿತಿರುವೆ
ನೀನು ಹೋಗುವ ಮುನ್ನ ಒಮ್ಮೆ
ನನ್ನೊಳಗೆ ಬಂದು ಹೋಗು
ಒಂದು ಮಾತು ಹೇಳಿಹೋಗು.

ಕನ್ನಡಿಯ ಸೂರ್ಯ

ನಾನಿನ್ನೂ ಸಣ್ಣ ಹುಟುಗ, ಬೋಳು ಹಣೆ,
ಬರಿಗೈಯ ನನ್ನ ಅಮ್ಮ ಕೂತಿದ್ದಳು
ಕಿಟಕಿಯಲ್ಲಿ ಕಣ್ಣಿಟ್ಟು. ಪೂರ್ವದಲ್ಲಿ ಮೂ
ಡಿರಲಿಲ್ಲ ಸೂರ್ಯ. ಮುಸುಕಿತ್ತು ಆಕಾ
ಶದ ತುಂಬ ಮೆಕ್ಕೆ ಹಣ್ಣಿಂಥ ಆಷಾ
ಢದ ಮೋಡ

ಹನಿಯೂ ಶುರುವಾಯಿತು ಮೆಲ್ಲಗೆ. ಕಿ
ಟಕಿ ಮುಚ್ಚಿ ಒಳಕೋಣೆಗೆ ಹೋದಳು ಅಮ್ಮ
ಸೆರಗ ಹಿಡಿದ ನಾನೂ. ಕನ್ನಡಿಯ
ಮುಂದೆ ನಿಟ್ಟುಸಿರುಬಿಡುತ್ತಾ ಕೂತ
ಅಮ್ಮ. ಮಳೆ ಈಗ ಜೋರಾಗಿಯೇ ಬರುತ್ತಿ
ತ್ತು ಹೊರಗೆ.

ಕನ್ನಡಿಯಲ್ಲಿ ಕಾಣುತ್ತಿತ್ತು ಅಮ್ಮನ
ಮುಖ. ಬೆಳ್ಳನೆ ಹಣೆ. ಕೆದರಿ ಹಾರಾ
ಡುವ ಮುಡಿ. ಸುಮ್ಮನೆ ನೋಡುತ್ತಾ ಕೂ
ತಿದ್ದಳು ಅಮ್ಮ ಕನ್ನಡಿಯಲ್ಲಿದ್ದ ತನ್ನ ಮು
ಖವನ್ನ. ನಡುಗುವ ಕೈಯಲ್ಲಿ
ಮೆಲ್ಲಗೆತ್ತಿಕೊಂಡಳು ಕುಂಕುಮದ ಡಬ್ಬಿ

ಬೋಳುಗನ್ನಡಿ ತೊಟ್ಟಿಕ್ಕುವ ಮಳೆ ಹನಿ.
ಇನ್ನೂ ಹದಿನೆಂಟು ತುಂಬದ ನನ್ನ ಅಮ್ಮ.
ಮಳೆನಿಂತು ತೊಳೆದ ಕನ್ನಡಿಯಂಥ ಆಕಾಶ.
ಮುಖವನ್ನೇ ನೋಡುತ್ತ ಮೆಲ್ಲಗೆ ಅಮ್ಮ
ತಿದ್ದಿದಳು ಕನ್ನಡಿಯಲ್ಲಿ ದುಂಡಗೆ ಹೊಳೆವ
ಸೂರ್ಯನ್ನ

ಕಾವ್ಯದ ಆತ್ಮಾನುಸಂಧಾನ

ಕಣ್ಣು ತಪ್ಪಿಸಿ ಅಜ್ಜನ ನಿಮಿತ್ತದ ಕವಡೆ
ಆಡಿದ್ದು ಉಂಟು;

ಕಣ್ಮರೆಯಾದದ್ದನ್ನು ಹಳೆಮನೆಯ ನಾಗಂದಿಗೆಯಲ್ಲಿ ಕಂಡು
ಈಗ ಅನಿಮಿತ್ತ ನನಗೆ ನಾನೇ ಆಡಿಕೊಳ್ಳುವ ಪಾರಿಧಿಯ ಅಪರೂಪವಾದ
ಈ ವಿಶೇಷ

ಮುಷ್ಟಿಯಲ್ಲಿ ಜಾರುವ ನಯದ ತಕರಾರು ಬಿಸ್ಸಿ
ಹಾರಿಸಿ
ಬಾಲಕನಂತೆ ಚಪ್ಪಾಳೆತಟ್ಟಿ
ಚಾಚಿದ ಮುಂಗೈ ಮೇಲೆ ಬಾಲ್ಯದಲ್ಲಿ ಕರಗತವಾದ ಕೌಶಲ್ಯದಲ್ಲಿ ಹಿಡಿದು
ಮುಂಗೈಯಿಂದ ಇನ್ನೂ ಮೇಲೆ ಎಸೆದು
ಸಾವಕಾಶದಲ್ಲಿ ಆಚೀಚೆ ಆಡಿಸಿ ತಡೆದು
ಮತ್ತೆ ಮುಂಗೈ ಮೇಲೇ ತಂಗಿಸಿಕೊಂಡು
ಇನ್ನೂ ಮೇಲೆ ಮೇಲೆ ಚಿಮ್ಮಿಸಿ ಮತ್ತೆ ಮತ್ತೆ ಪಡೆದು
ತೊಡೆ ತಟ್ಟಿ, ಚಾಚಿ ಕಾಯುವ ಮುಂಗೈಗೆ ಮುದತಂದದ್ದನ್ನು
ಕ್ಷಣದಲ್ಲಿ ಹಾರಿಸಿ
ಮುಂಗೈ ಮುಷ್ಟಿಯಲ್ಲಿ ಈಗ ಅಧೀನವಿಸ್ಸುವ
ಅನ್ನಕ್ಕೆ ಹಿಗ್ಗುವುದು

ತೆರೆದ ಅಂಗೈ ಮೇಲೆ ಹೊಳೆಯುವ ನಿಮಿತ್ತದ ಪರವಸ್ತುವಿಗೇ
ಆಸೆ ಹುಟ್ಟಿಸುವಂತೆ ನೋಡುತ್ತ
ಇಕೊ ದೇವರೇ ಎಂದು

ಆಕಾಶಕ್ಕೆ ಎಸೆದು
ಅವಸರದ ಬೆರಳುಗಳು ಹೊಂಚಿ ನರ್ತಿಸುವ ನಿರೀಕ್ಷೆಯಲ್ಲಿ
ಮಗುಚಿ ಬೀಳುವುದೆ ಸಹಜವಾದ ಪದಾರ್ಥ
ಅಂಗಾತಬಿದ್ದು ನಾಲ್ಕು ಕಣ್ಣುಗಳಾಗಿ ಒದಗಲೆಂದು
ಪ್ರಾಣವನ್ನೆ ಕಣ್ಣಲ್ಲಿ ತಂದು ಹಸಿಯುವುದು.

ನಾನು ಆಡುವ ಮಾತು ನನ್ನನ್ನೆ ಕಾಣಬಲ್ಲವೆ?

ಕಷ್ಟ ಸಂಕಲ್ಪ ಸಾಲದು; ಅದೃಷ್ಟ ಬೇಕು.

ಕಿರು ಪದ್ಯಗಳು

೧

ಯಾವಾಗ
ನಿದ್ರೆಗೆ ಜಾರಿದನೋ
ಗೊತ್ತಿಲ್ಲ
ಎಚ್ಚರಾದಾಗ ನಿನ್ನ
ಕನಸು ನನ್ನ
ರೆಪ್ಪೆಗಳ ಮೇಲೆ
ತೂಗುತ್ತಿತ್ತು.

೨.

ಮಲಗುವ
ಸನ್ನಾಹದಲ್ಲಿ
ಜಗತ್ತು ಮುಳುಗಿದೆ:
ನನ್ನ
ಜಗತ್ತು
ಪುಟ್ಟದು
ಅದೆಂದರೆ,
ನೀನೇ;
ನಿದ್ರೆ,
ಎಚ್ಚರ
ಯಾವುದೂ ಇಲ್ಲದ
ಅನಂತ.

೩

ನಾನು ಚಿರಾಯುವಾಗಿದ್ದಿದ್ದರೆ
ಅದು ಬೇರೆ ಮಾತಾಗುತ್ತಿತ್ತು;
ಆದರೆ ಅದು ಹಾಗಿಲ್ಲವಾದ್ದರಿಂದ
ಕ್ಷಣಕ್ಷಣವೂ ನಿನ್ನ ಪ್ರೀತಿಸದೆ
ನನಗೆ ಬೇರೆ ದಾರಿಯಿಲ್ಲ.

೪

ನಿನ್ನ ಜೊತೆಗಿದ್ದು
ಪ್ರೀತಿಯ ಪಾಠವನ್ನು
ನಾನು ಕಲಿತದ್ದು ಹೀಗೆ:
ಮೊದಲು ಖಾಲಿ
ಆಮೇಲೆ ಅಕ್ಷರ
ನಂತರ ಪದ
ಅನಂತರ ವಾಕ್ಯ
ಹಾಗೇ ಬೆಳೆದದ್ದು ಅಧ್ಯಾಯ
ಪುಸ್ತಕದ ಕೊನೆಯಲ್ಲಿ
ಉಳಿದದ್ದು ಖಾಲಿ.

೫

ತಂಗು ಬಾ. ಈ ರಾತ್ರಿ
ನನ್ನ ಮೊಲೆಗಳಲ್ಲಿ
ಬದುಕಿನ ಆಯಾಸವೆಲ್ಲ
ಹಾಲಾಗಿ ಹರಿಯಲಿ.

ಮುತ್ತಿನಿಂದ ಹೊಲೆದುಬಿಡು,
ಈ ನನ್ನ ಕಣ್ಣು ತುಟಿಗಳನ್ನು
ಜಗದ ಭಯ ತಲ್ಲಣಗಳು
ನೀಗಿ ಹೋಗಲಿ.

ಮಲಗಿ ನಿದ್ರಿಸು ಬಾ
ಈ ನನ್ನ ಹೊಕ್ಕುಳಲ್ಲಿ
ಸಂತನೊಬ್ಬ ಅಲ್ಲಿಂದ
ಹುಟ್ಟಿಬರಲಿ.

೬

ನಿನ್ನನ್ನು ನಾನು
ಏಕೆ ಪ್ರೀತಿಸಬೇಕು
ಎಂದುಕೊಂಡಾಗಲೆಲ್ಲ
ಮನಸ್ಸಿನಲ್ಲಿ ಮೂಡುವ
ಚಿತ್ರಗಳು ಎರಡು;

ಮೌನವನ್ನು ಒಟ್ಟುಗೂಡಿಸುವ
ಕಪ್ಪೆ ಚಿಪ್ಪು ಒಂದಾದರೆ,
ಮುತ್ತುಗಳ ತೊಟ್ಟಿಲು ತೂಗುವ
ಕೈ ಬೆರಳುಗಳು
ಮತ್ತೊಂದು.

೭

ಮೊದಲು,
ಕುಡಿಯುತ್ತೇನೆ ನಾನು
ನಿನ್ನೆದುರು ನೀನು
ಹರಡಿಕೊಂಡು ಕುಳಿತ
ಬಣ್ಣದ ಶೀಶೆಯೊಳಗಿನ ಜಗತ್ತನ್ನು.

ಈಗ, ನೀನು ಆ ಬ್ರಶ್ ಅನ್ನು ಹಿಡಿ
ನನ್ನೊಳಗೆ ಅದ್ದು ಆಡಿಸು
ಚಿತ್ರಗಳ ಮೂಡಿಸು,
ಎಲ್ಲ ಕಾಲಕ್ಕೂ ಜಗತ್ತು
ಅವುಗಳನ್ನು ನೋಡುತ್ತಲೇ ಇರಲಿ.

■

ಕೆಲವು ಮಾತುಗಳೇ ಹಾಗೆ

ಕೆಲವು ಮಾತುಗಳೇ ಹಾಗೆ
ಸ್ವಲ್ಪ ದೀರ್ಘವಾಗಿರುತ್ತವೆ ಹಳೆಯ
ಸಾಲದ ಉದ್ದನೆಯ ಕರಾರು
ಪತ್ರದ ವಾಕ್ಯಗಳಂತೆ ಶಬ್ದಶಬ್ದಕ್ಕೂ
ಕಾಮ, ಕೊನೆಯ ಪ್ಯಾರಾಕ್ಕೊಂದು ಶೂನ್ಯ.
ಸಾಲು ಸಾಲಿನ ನಡುವಿರುವ ಖಾಲಿ ಜಾಗದಲ್ಲಿ
ಜೈಲಿನ ಕಂಬಿಗಳ ನೆರಳು ಕಾಣುತ್ತದೆ.
...
ಕೆಲವು ಮಾತುಗಳೇ ಹಾಗೆ
ಸ್ವಲ್ಪ ಖಾರವಾಗಿರುತ್ತವೆ
ತಡೆಹಿಡಿದ ಶತಮಾನದ ಸಿಟ್ಟುಗಳು ಮೈತಾಳಿ
ಕುಣಿಯುತ್ತವೆ – ಹೇಳದೆ ಉಳಿದ
ಶಬ್ದಗಳು ಕೂಡ ಏಕಾಂತವನ್ನು
ದಹಿಸುತ್ತವೆ. ನಿನ್ನೆಯನ್ನು ಹಿಡಿಯುತ್ತಲೇ
ನಾಳಿನ ಯಜಮಾನತ್ವವನ್ನು ಸ್ಥಾಪಿಸುತ್ತವೆ.
....
ಕೆಲವು ಮಾತುಗಳೇ ಹಾಗೆ
ಒಂದು ಉದಾಸತೆಯಲ್ಲಿ ತಟ್ಟುತ್ತವೆ.
ಗಡಚಿಕ್ಕುವ ಆಟೋ, ಲಾರಿ, ಸರಿವ
ಸೈಕಲ್ ಗಾಡಿ, ಬಾಂಬೆ ಮಿಠಾಯಿಯ ಗಂಟೆಯ
ಸದ್ದನ್ನು ಆಳುತ್ತ ಹಿಂಬಾಲಿಸುವ
ಪೋರನ ದೊಡ್ಡ ಅಳುಧ್ವನಿ ಎಲ್ಲವನ್ನೂ
ಮೀರಿ ತಲುಪುತ್ತವೆ. ಆಯಿತೇ? ಎಲ್ಲಾ ಕ್ಷೇಮ.
ನಿನ್ನೆ
ಬರ್ತಡೇ ಪಾರ್ಟಿಯಲ್ಲಿ ಪಾರೂ ತುಂಬ ಕುಡಿದಳು.

ಕೊಂಡಿಯೇ ಇಲ್ಲದೇ
ಕೆಲವು ಮಾತುಗಳು ಕೊಂಡಿ ತಪ್ಪಿಸುತ್ತಲೇ ಮಂಚ
ಹಂಚಿಕೊಂಡ ಸಂಬಂಧಗಳನ್ನು ಕೂಡ.

.....

ಕೆಲವು ಮಾತುಗಳೇ ಹಾಗೆ
ಆರ್ದ್ರಗೊಂಡ ಧ್ವನಿ ತುಂಬಿಕೊಂಡ ಕಣ್ಣು
ಮುಸ್ಸಂಜೆಯಲ್ಲೂ ತೊಳೆದ ಮುಖದ ನೆರಳು
ಎಲ್ಲಾ ಎಲ್ಲಿ ಈ ಸುಡುಬಿಸಿಲಲ್ಲಿ ನೆನಪಿಗೆ ದಕ್ಕುತ್ತವೆ.

.....

ವಿಚ್ಛೇದನ ಪತ್ರದಲ್ಲಿಯೂ ಇರುವ
ಎರಡು ಚಿಕ್ಕ ಸಹಿಗಳು ಈಗಲೂ
ಅದುರುತ್ತಿರುವುದನ್ನು ತೆಳು ಗಾಳಿಗೆ
ಮಾತಾಗಿ ಬಿಟ್ಟುಕೊಡುತ್ತವೆ.

ಗಾಜಿನ ಬೆರಣಿ

ಗಾಜಿನ ಬೆರಣಿಯ ತೋರಿಸಿ
ಅಮ್ಮನಿತ್ತ ತುತ್ತು
ನಾಲಿಗೆಯಲಿನ್ನೂ ಹೊರಳುತ್ತಿದೆ
ಛದ್ಮವೇಷದ ಈತನ
ನೆನಪು ಕಾಲಕಾಲಕೆ
ಕಾಡುತ್ತಲೇ ಇದೆ.

ಕಾಲೇಜಿನ ಕಿವಿಯಲಿ
ರಿಂಗಣಿಸಿದ ಕಾವ್ಯ
ತುಂಡುರೊಟ್ಟಿ, ಬೆಳ್ಳಿತಟ್ಟೆ
ತೇಲುವ ಬೆಣ್ಣೆ, ಆಗಸದ ಕಣ್ಣು
ರಮ್ಯ, ರಸಿಕ, ರೋಮಾಂಚನಕೆ
ಉಪಮಾನವಷ್ಟೇ
ಚಂದ್ರಮತಿ, ಚಂದ್ರಮುಖಿ
ಗುರುಪತ್ನಿಯ ಭೋಗಿಸಿದ ಜಾರ
ತುಡುಗ, ತುಂಟ
ಮೋಡದೊಡನೆ ಚೆಲ್ಲಾಟ,
ಮೋಹಕ ಮನಸ್ಸು
ಭಾವದೊಡನೆ ಲೀನ

ಲಗ್ನಕುಂಡಲಿಯಲಿ
ಮಂಗಳನ ವಾಸ
ಗಂಡನಿಗೆ ದೋಷ

ಅಮ್ಮನಿಗೆ ಹೊಳೆದುಪಾಯ
ವರ್ಷಕ್ಕೆರಡು ಚಂದ್ರನುಪವಾಸ
ಬೆಳ್ಳಿಹಬ್ಬದವರೆಗೂ
ಗಂಡನಾಯಸ್ಸು ಗಟ್ಟಿ!

ಜಗಲಿಗೆ ಬೀಡುಬಿಟ್ಟ
ಪಡೆದ ದೇವರ ಪಟ್ಟ

ನೆಲದ ಎದೆಯಿಂದ
ತಿದಿಯೊತ್ತಿ ಪುಟಿದು
ಹಂಡೆ ಶಕ್ತಿಯನುಂಡು
ಕೋಟಿ ಮೈಲಾಚೆ
ಒಡೆದು ಬೆರಗಿನ ಕೋಟೆ
ಹೆಮ್ಮೆ ಹೊತ್ತ ಚಿಮ್ಮಿದ
ಚಂದ್ರಯಾನ

ಆಗಸಕೆ ಏಣಿ
ಪಾತಾಳಕೆ ಕನ್ನ
ದೂರದೂರಿನ ಠಾವಿಗೆ
ಹಾವು ಏಣಿಯಾಟ
ಕಂಡ ಕನಸು ಬಿತ್ತಿ
ಮುತ್ತಿನ ತೆನೆಗೆ
ಕಾಯ್ವ ಚಿತ್ತ
ದೇಶದ ಎದೆಯತ್ತ
ಜಗದ ಕಣ್ಣು ಸುತ್ತ

ಮಥಿಸಿದ ಉತ್ತರಕೆ
ಕಾತರದ ಪುಳಕ
ಚಂದ್ರನೂ ಬೇರಲ್ಲ
ಅದೇ ಕಲ್ಲು, ಮಣ್ಣು
ಕಟ್ಟಬಹುದೇ ಅಲ್ಲೂ!
ಮನೆ... ಮಠ, ಮಸಣ...
ಠಾವು ಸಿಕ್ಕೀತು...
ಉಳಿದೀತೆ... ಭಾವ!

ಗುರುತು

ನಿನಗೆ ನನ್ನ ಗುರುತು ಸಿಗಲಿಲ್ಲ
ಕಂಡರೂ ಸುಮ್ಮನೆ ದಾಟಿ ಹೋದೆ
ಏಕೆಂದರೆ ನೀನೀಗ ತುಂಬ ಬದಲಾಯಿಸಿದ್ದಿ
ನಿನ್ನ ಮುಖಚಹರೆ ಮುನ್ನಿನಂತಿಲ್ಲ
ಮಾತು ಮಾತ್ರವಲ್ಲ ಮಾತಿನ ಸ್ವರವೂ ಹೊಸತೇ.

ನನ್ನ ಸುತ್ತಲಿನ ಬಹಳಷ್ಟು ಮಂದಿ
ಮೊದಲು ಹೇಗಿದ್ದರೋ ಹಾಗೆಯೇ ಇದ್ದಾರೆ
ನಾನು ಮಂದಿಯಲ್ಲೊಬ್ಬ
ನನಗೇ ನಾನು ಸುತ್ತು ಹಾಕಿಕೊಂಡು
ಮೊದಲು ಹೇಗಿದ್ದನೋ ಹಾಗೆಯೇ ಇದ್ದೇನೆ.

ನೀನು ಹಾಗಲ್ಲ, ಮೈಮನಗಳಲ್ಲಿ ತೀರ ಹೊಸತು
ಹಳತನ್ನೆಲ್ಲ ಮರೆತು ಹೊಚ್ಚ ಹೊಸ ಗುರುತು;
ನನ್ನನ್ನು ನಿನಗೆ ಹಿಡಿಯಲಾಗದು.

ತಪ್ಪು ನಿನ್ನದಲ್ಲ- ಬದಲಾಗದ ನನ್ನದೇ

ನಿನಗೆ ಗುರುತಾಗುವುದಕ್ಕಾದರೂ
ನಾನು ಬದಲಾಗಬೇಕು

ಅಥವಾ

ನಾನು ನೀನಾಗಬೇಕು
ನೀನು ನಾನಾಗಬೇಕು......

ಚಿತ್ರಪಟ

ಪ್ರತಿ ನೋಟದೊಳಗೂ ಒಂದು ಚಿತ್ರ
ಅದರ ಸುತ್ತ ನಾವು ನೋಡಲಾಗದ ಚಿತ್ರ
ಸರಿದಂತೆ ನೋಟ ಬದಲಾಗುವ ದೃಶ್ಯ
ನೋಡಿದ ನೋಡುವ ನೋಡಲಾಗದ ಚಿತ್ರಪಟ

ನೋಡುವ ಚಿತ್ರಕ್ಕೆ ನೋಡಲಾಗದ ಚಿತ್ರವೇ ಚೌಕಟ್ಟು
ಭಾವವೊಂದಕ್ಕೆ ಭಾವವೇ ಚೌಕಟ್ಟು
ಅರಿತುಕೊಂಡ ನನ್ನ ದೇಹ ಯಾವ ಕಟ್ಟಿನಲ್ಲಿ
ಹೊಕ್ಕು ಹರಿವ ನನ್ನ ಜೀವ ಯಾವ ಇರವಿನಲ್ಲಿ

ಅವರ ಕಣ್ಣುಗಳನ್ನು ಕೇಳುವುದೇ
ಮಿಥ್ಯೆಯ ಸಂಭ್ರಮದಲ್ಲಿ ಅವರ ರೆಪ್ಪೆ
ಇವರ ಕಣ್ಣುಗಳಿಗೆ ಶರಣೆನ್ನುವುದೇ
ಸತ್ಯದ ಸುಖದಲ್ಲಿ ಇವರ ಬಿಂಬ

ರೆಪ್ಪೆ ಎಳೆಗಳ ನಡುವೆ ಮನವು ಆಡುವ ಆಟ
ಮನವ ದಾಟುವವರೆಗೆ ಮಾಸಲಾಗದ ನೋಟ
ನನ್ನ ದೇಹ ನನ್ನ ಜೀವ ಸದಾ ಯಾರದೋ ಚಿತ್ರ
ರೂಪ ರೂಪ ತೊಟ್ಟ ಮೇಲೂ ಅರಿಯಲಾಗದ ಚೌಕ

ಶಬ್ದ ಹಿಡಿದು ಹೊರಟರೆ ಶಬ್ದವೇ ಏಣಿ ಏರಿದಷ್ಟೂ ಚೌಕ
ಮೌನ ಹಿಡಿದು ಹೊರಟರೆ ಮೌನವೇ ಮಾಲೆ ಕಟ್ಟಿದಷ್ಟೂ ಭಾವ

ಕಾಣಲಾಗದ ಸಾಕ್ಷಿಯಲ್ಲಿ ಕಾಣುವ ಎಲ್ಲವೂ ಅವಿತು
ಮುಟ್ಟಲಾಗದ ನೆರಳಲ್ಲಿ ಕಾಡುವ ಎಲ್ಲವೂ ಕಲೆತು

ಆಡಿಕೊಂಡಿದೆ ಲೋಕ ಕಣ್ಣ ಕೊಳದಲ್ಲಿ
ಕಳೆದು ಹೋಗಿದೆ ಕಣ್ಣು ಲೋಕ ಬಾವಿಯಲ್ಲಿ

ಜೀವ ಪಂಜರ

ಪ್ರೇಮಪಕ್ಷಿಗೆ ಹಂಬಲಿಸಿ
ಅಲವತ್ತ ಮಗನಿಗೆ ಅಪ್ಪ ಕೊಟ್ಟಿದ್ದು
ಎರಡಡಿ ಉದ್ದ ಒಂದಡಿ ಅಗಲದ ಪಂಜರ

ನಡುವೆ ಅಡ್ಡ ಹಾಕಿದ ಸಲಾಕೆ
ಪಕ್ಕದಲ್ಲಿ ಕುಕ್ಕಿ ತಿನ್ನಲು ಕಾಳುಬಟ್ಟಲು
ಗುಕ್ಕು ನೀರು ಕುಡಿಯಲು ನೀರ ಮಿಳ್ಳೆ
ಒಳಗೆ ನಲುಗಿದ ನಾಲ್ಕು ಕಣ್ಣು

ಕಾತರ ಕಳವಳ ಪತರು ಚಿಲಿಪಿಲಿ
ಅತ್ತಿಂದ ಇತ್ತ ಇತ್ತಿಂದ ಅತ್ತ
ಅಕ್ಕ ಪಕ್ಕ ಮೇಲೆ ಕೆಳಗೆ
ಹಾರಲಾರದೆ ಹಾರಿ
ಕೂರಲಾರದೆ ಕೂತು
ಕಂಗಾಲಾದ ಜೋಡಿ ಜೀವ

ಅಪ್ಪ ಅಮ್ಮನ ಕಣ್ಣು
ಮಗನ ನಗೆ ಮಿಂಚಲ್ಲಿ
ಮೂಡುಬಾಗಿಲು ದಾಟಿ
ದಾರಿಗತಿ ಹರಿದಂತೆ
ಓಣಿ ಕೇರಿಯ ತುಂಬ
ಊರಗಲ ಬಾಯಾಗಿ
ಬಂದು ನೋಡುವ ಕಣ್ಣು ಮಾರಿಜಾತ್ರೆ.

ಹೊತ್ತು ಹೊತ್ತಿನ ತುತ್ತು ಕಾಳುಬಟ್ಟಲು ತುಂಬಿ
ಗುಟುಕು ನೀರಿಗೆ ಜೀವ ಕುಲ್ಲುಮಿಳ್ಳೆ

ಅಂತಪ್ಪ ದಿನಮಾನ ದಿನದೊಂದು ಹೊತ್ತಾರೆ
ಪಂಜರದ ಕಿರುಕಿಂಡಿ ತೆರೆದ ಯಾಮಾರಿಕೆ
ಜೀವವೊಂದಕ್ಕೆ ಸಿಕ್ಕ ಬಿಡುಗಡೆಯ ನಂಟು

ನುಸುಳಿ ಹೊರಹಾರಿದ್ದೆ ಮೂಡುಬಾಗಿಲ ದಾಟಿ
ರೂಪು ರೂಪನು ಮೀಟಿ ಬಾನಲ್ಲಿ ಬಾನಾಗಿ
ತಾನಾಗಿ ಮಾನಾಗಿ ಹುಡುಕಗಣ್ಣಿನ ತುಂಬ
ಆಕಾಶ ಬಿಂಬ

ಜೀವ ಜೀವದ ನಂಟು ಪರಲು ಹರಿದಾ ಗಂಟು
ಚಡಪಡಿಕೆ ಚೀತ್ಕಾರ ಪಂಜರದ ಜೀವಕ್ಕೆ

ಒಂದು ಕಳೆದ ತಪ್ಪಿನಲ್ಲಿ
ಅತ್ತು ಹಲವರಿದವನು
ಉಳಿದ ಜೀವಕಾಗಿ ಮತ್ತೆ
ಜೋಪಾನವ ಜೀತಕಿಟ್ಟ.
ಕಾಳಿಟ್ಟ ನೀರಿಟ್ಟ
ಕಿಂಡಿಕದ ಬಿಗಿದಿಟ್ಟ.

ದಿನವೆರಡು ಕಳೆದರೂ
ಚಡಪಡಿಕೆ ಚೀತ್ಕಾರ
ಎಡೆಬಿಡದೆ ಹರಿಯುವಾ
ಗೋಳುಗುಮ್ಮಟ ಧಾರ
ಮೂರನೆಯ ಮುಂಜಾನೆ
ನೀರವದ ನಿಡುಗಾಳಿ
ತಣ್ಣನೆಯ ಬಣ್ಣದಲಿ

ಅಲವತ್ತ ಮಗನಿಗೆ ಅಪ್ಪ ಕೊಟ್ಟದ್ದು
ಎರಡಡಿ ಉದ್ದ ಒಂದಡಿ ಅಗಲದ ಪಂಜರ.

ತಾಯ್ ಗಾತೋಸಾನ್‌ಗೆ

ಕ್ಯೋತೋ ಮರದ ಪುಣ್ಯವೆ,
ಎಂದಿಂದ ಕಾದಿದ್ದೆ ನಡುಹಗಲ ಹಾದಿಬದಿ?
ಎಲ್ಲಿ ನಿನ್ನ ಎಳೆಚಂದ್ರ ಮಕುಟ?
ಗುಂಪುಗೋಜಲ ಹಾದಿ ಅಂಗಡಿಗಳಾಸಿ
ಒಯ್ದೆ
ದಿಬ್ಬದ ಮೇಲೆ
ತಿಳಿನೀರ ದೇಗುಲಕ್ಕೆ

ಕಡಿದಾದ ದಿಬ್ಬವನ್ನೇರಿ ಇಲ್ಲಿ ನೆಲಸಿದ ಬುದ್ಧ
ಹೆಂಗರುಳಾದ,
ಹೆಣ್ಣಾದ ನಿನ್ನಂತೆ

ಸಾಗುತಿದೆ ಇಗೋ
ಗೀಷೆಯರ ಪಾತರಗಿತ್ತಿ ಗುಂಪು
ಹೆಣ್ಣುಬುದ್ಧನ ಗುಡಿಗೆ
ಇರುಳಿಳಿವ ಮುಂಚೆ
ನದೀತಟದ ಯುವಪ್ರೇಮಿಗಳ ಕಣ್ಣಲ್ಲಿ
ಸೇತುವೆಯ ಸೂರ್ಯಾಸ್ತ

ಸರಕುಗಳ ಸ್ವರ್ಗ ಅಂಗಡಿಸಾಲಿ ಜನಜಂಗುಳಿಯ ನಡುವೆ
ನಮ್ಮನ್ನು ಬಿಟ್ಟುಹೋದೆ

ಚಂದ್ರನ ಹಾಗೆ
ಅಂಗಡಿಸಾಲ ಜನಜಂಗುಳಿಯ ನಡುವೆ
ತಿರುಗಿ ಬಂದೆ

ಯಾರು ಯಾರಿಗೆ
ಈ ಒಡಲು ಗಾಡಿ ಲೈಟುಗಳ ಪರಿಷೆಯಲ್ಲಿ?
ನೀನುಂಟು ನಮಗೆ

ಎಚ್ಚರಿಕೆಯಿಂದ ಕಾಪಾಡುತ್ತಿದ್ದೀಯ
ಮುದ್ದುಮರಿ ಬೆಕ್ಕನ್ನು
ಜನರ ನೆರೆಯಲ್ಲಿ

ದಣಿವಿನ ದಿವಸ ಸಂಜೆ ಟ್ರೇನಲ್ಲಿ
ತಣುವು ನಿನ್ನ ಮುಗುಳ್ನಗೆ –
ಶಾಂತ ಚಂದ್ರಿಕೆ

ಕಂಡೆ ಆ ಇರುಳು;
ನಿನ್ನ ತೋಟದ ಕೊಳದಲ್ಲಿ
ಮೋಡದ ನಡುವೆ ಚಂದಿರನ ನಿದ್ದೆ –
ಸ್ವಪ್ನ

ಅಂತೂ ಕೊನೆಗೆ
ಕೈ ಬೀಸಿ ಬೀಳ್ಕೊಟ್ಟೆ
ಆ ವಿದಾಯಗಳ ಹಗಲು
ಎಲ್ಲ ಅನಿತ್ಯ ಸ್ನೇಹದಂತೆ

ಸದ್ಯಕ್ಕೆ ನಲಿಯಲಿ
ಕಣಿವೆ ಬೆಟ್ಟಗಳು ಬಿಸಿಲು ಹಸಿರಲ್ಲಿ
ಅನಿವಾರ್ಯ ಹಿಮದ ಬಟ್ಟೆಯ ಮರೆತು

ತುಂಬಿಕೊಂಡಿರಲಿ
ಮಾರುಕಟ್ಟೆಯ ಬಸಿರು ಸರಕುಗಳಿಂದ,
ಕಳೆದ, ಬರುವ ಬರಗಾಲಗಳ ಮರೆತು

ಕೈ ಹಿಡಿದು ನಡೆಸುತಿರು
ತಿರೆಯ ನಗರಗಳ ಬೀದಿ ಮಾರ್ಕೆಟು ಗೋಜುಗಳಾಸಿ
ತಿಳಿನೀರ ಗುಡಿ ಕಡೆಗೆ.

■

ದೇವಿ

ಅವಳು ಮಲವಿಲ್ಲದ ನಿರ್ಮಲೇ.
ಅವಳು ಲೋಲಾಕ್ಷಿಕಾಮರೂಪಿಣಿ

ಕಾಮಕ್ಕೇ ಯೋಗೇಶ್ವರಿ, ಕ್ರೋಧಕ್ಕೇ ಮಾಹೇಶ್ವರಿ
ಲೋಭಕ್ಕೆ ವೈಷ್ಣವಿ, ಮದಕ್ಕೆ ಬ್ರಹ್ಮಾಣಿ,
ಮೋಹಕ್ಕೆ ಸ್ವಯಂಭೂ ಕಲ್ಯಾಣಿ, ಮಾತ್ಸರ್ಯಕ್ಕೆ ಇಂದ್ರಜಾ
ಪೈಶುನ್ಯಕ್ಕೆ ಯಮದಂಡಭದ್ರಾ, ಅಸೂಯೆಗೆ ವಾರಾಹೀ.

ದೇವಿಯೆಂದರೆ ಇಚ್ಛಾಶಕ್ತಿಜ್ಞಾನಶಕ್ತಿ ಕ್ರಿಯಾಶಕ್ತಿಸ್ವರೂಪಿಣಿ.

ಅವಳು ರುರಸ್ಥಿತಾ, ಮಾಂಸನಿಷ್ಠಾ, ಮಧುಪ್ರೀತಾ,
ಮಧ್ವಾಪಾನಾಲಸಾಮತ್ತಾ, ಬಲಿಪ್ರಿಯಾ, ಸುಖಾರಾಧ್ಯಾ,
ಲಾಸ್ಯಪ್ರಿಯಾ, ವಿಶೃಂಖಲಾ, ರತಿಪ್ರಿಯಾ, ಕಾಮಕೇಲಿತರಂಗಿತಾ

ಶಕ್ತಿ ದೇವಿಯ ಯೋಗವಿಲ್ಲದಿದ್ದರೆ
ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವರು
ಪ್ರೇತಗಳಂತೆ ನಿಶ್ಚಲರು
ಅವಳು ಅವರನ್ನೇರಿ ಕುಳಿತ ಪಂಚಪ್ರೇತಾಸನಾಸೀನೆ

ಅವನು ಶುದ್ಧಜ್ಞಾನಸ್ವರೂಪನಾದರೆ, ಅವಳು ವಿಮರ್ಶಾಸ್ವರೂಪಳು.
ಅವಳು ಅಂತರ್ಮುಖಸಮಾರಾಧ್ಯಾ ಬಹಿರ್ಮುಖಸುದುರ್ಲಭಾ
ಅವಳು ಕಾಮೇಶಿ, ಕಾಮಿತಾರ್ಥದಾ, ಕಾಮಸಂಜೀವಿನಿ, ಕಾಮದಾಯಿನಿ

ಅವಳು ಲಬ್ಧಪತಿಃ ಲಬ್ಧಭೋಗಾ ಲಬ್ಧಸುಖಾ ಲಬ್ಧಕಾಮಾ
ತನ್ನಿಚ್ಛೆಯಂತೆ ಪತಿ, ಭೋಗ, ಸುಖ, ಕಾಮವನ್ನು ಹೊಂದಿದವಳು.

ಅವಳು ಕುಡಿಯಬಹುದು, ಕುಣಿಯಬಹುದು, ಕೇಳಿಯಲ್ಲಿ
ಮುಳುಗಿ ತೇಲಬಹುದು
ಹಿಡಿಯಲಾರಿರಿ ನೀವು ಅವಳನ್ನು ಪಬ್ಬುಗಳಲ್ಲಿ
ಹೊಡೆದು ಕೆಡವಿ ದಕ್ಕಿಸಿಕೊಳ್ಳಲಾರಿರಿ
ಮಬ್ಬು ಬೆಳಕಲ್ಲಿ ಕಾಣಲಾರಿರಿ ನಿಮ್ಮ ಮಂಜುಕಣ್ಣುಗಳಲ್ಲಿ
ಎದ್ದುಬರುತ್ತಾಳೆ ನೂರು ನಾಲಿಗೆ ಚಾಚಿ ರಕ್ತ ಹೀರುತ್ತ
ಅವಳ ಬೊಗಸೆಯೊಳಗೆ ನೀವು ಆಪೋಶನ
ಸಿಂಧೂರ ಕೇಸರಿಗೆ ಅವಳೇ ಅಧಿದೇವತೆ
ನಿಮ್ಮದೆಲ್ಲ ಬರೀ ನೀರಿಗೆ ಕರಗುವ ಗುಲಾಲು
ಗಲ್ಲಿಗಲ್ಲಿ ನುಸುಳಿ ಕಂಬದ ಮರೆಯಿಂದ ಮುಲುಗುಡುವ
ಸಿರ್ಗೀಯರ್ಗರು ಬಲ್ಲಿರೇನಯ್ಯಾ ಅವಳ ಹುಟ್ಟಿನ ಕುಲವ
ಪೀಠಸ್ತ್ರೀಯನ್ನು ಅರ್ಚಿಸಿ ಭಜಿಸಿ ನೈವೇದ್ಯ ಭುಜಿಸಿ ತಿಲಕ ಧರಿಸಿ
ಮಡದಿಯ ಕಾಡಿಗಟ್ಟಿದವನ ಹೆಸರಲ್ಲಿ ಕವಿದು ಬಿದ್ದರು
ಹರಿಯ ಚರಣದಲಿ ಹರನ ಸತಿಯ ಮರೆತು

ಕಲಿತು ಬನ್ನಿರಿ ಮೊದಲು ಕ್ಷರ ಅಕ್ಷರಗಳ
ಹ್ರಸ್ವ ದೀರ್ಘ ಒತ್ತಕ್ಷರ ಒತ್ತು ಅಲ್ಪ-ಮಹಾಪ್ರಾಣಗಳ
ತೊಳೆದುಬನ್ನಿರಿ ಕಾಲು ಕಳೆದು ಹೊರಗಿನ ಮಲಗಳ
ಎರಗಿ ನಿಲ್ಲಿರಿ ಅಲ್ಲೆ ಬಾಗಿ ಮೈಕೈಗಳ
ಹೂಹಣ್ಣುಗಳ ಬಿಡಿ ಕಾಯಿ ಕರ್ಪೂರವೂ ಬೇಡಾ
ದಕ್ಷಿಣೆಯ ತಟ್ಟೆಗೆ ಬೀಳದಿದ್ದರು ಝಣಝಣ
ತೊದಲು ನಾಲಿಗೆಯಲ್ಲಿ ರಾತ್ರಿಯ ಇಳಿಯದ ನಶೆಯಲ್ಲಿ
ಮಂತ್ರ ಬಾರದು ಸ್ವಸ್ತಿ ಸರಾಗವಲ್ಲ ಅರ್ಚನೆಯ ಕುಂಕುಮ ಗಂಧವಿಲ್ಲ

ಆದರೂ ಒಲಿಯಬಹುದು ಅವಳು ಹೇಳಲಾಗದು
ನಿಮ್ಮ ಎದೆಯೊಳಗೆ ಇದ್ದರೆ ಪ್ರೇಮ
ಅರಿತರೆ ನೀವು ಅವಳು ಬರಿಯ ಬೊಂಬೆಯಲ್ಲ
ಹಾಡಿದರೆ ತಾಯಿ ಹರಸಿದರೆ ದೇವಿ.
ಒಲಿದರೆ ರತಿ ಕೆರಳಿದರೆ ಕಾಳಿ.

■

ನಗರದ ರಾತ್ರಿಗಳು

ಪಾದದ ಬೆರಳುಗಳ ಮುಂತುದಿಯಲ್ಲಿ ಬಾಣದಂಥ ಕ್ಯಾಕ್ಟಸ್‌ನ
ಮುಳ್ಳುಗಳು ಏಳುತ್ತವೆ.

ನನ್ನ ಪಾಲಿಗೆ ನಾನು ಕೋಣೆಯ ಮೂಲೆಯಲ್ಲಿ ಒಬ್ಬಂಟಿ
ಮಲಗಿರುವಾಗ ರೊಟ್ಟಿ, ಪಾಲಿನ ಸುತ್ತಲೂ ಮೇಲಿನ ರೋಗಿಷ್ಠ
ವೃದ್ಧೆಯ ಮನೆಯ ಕಕ್ಕಸಿನ ಕೊಳವೆಯಿಂದ ಹೊಲಸು ಹರಿದು
ಬರುತ್ತಿರುತ್ತದೆ.

ವಿದ್ಯುತ್ ಸ್ಪರ್ಶಕ್ಕೆ ಸಿಕ್ಕಿ ಕರಕಲಾದ ಹಲ್ಲಿ, ಕಟ್ಟಿರುವೆ, ಜೇಡಗಳಂತೆ
ಸಿನಿಮಾ ನಟಿಯರ ಕಟ್‌ಔಟ್‌ಗಳು – ಬೆಂಕಿಯ ಮೇಲೆ ಮಲಗಿಸಿ,
ಮನುಷ್ಯನಾಳದ ಎಲ್ಲ ಬೀಭತ್ಸ ನರಗಳನ್ನು ಮತ್ತೊಮ್ಮೆ
ದೇವರ ಮುಂದೆ ಪರೀಕ್ಷೆಗೆ ಒಳಪಡಿಸುತ್ತವೆ.
ಗಾಳಿ ಅಲೆಗಳಲ್ಲಿ ತಿರುಗುವ, ಲೋಹದ ಹಗ್ಗಕ್ಕೆ ಸಿಕ್ಕಿ ಹೊಸ್ಯದಲ್ಲಿ
ನೇತುಬೀಳುವ ನಾನು ಬೆಳಕ ಜೀರುವ ಮಾಂಸದ ಹುಳು.

ನಗರ ಇಡೀ ರಾತ್ರೆ
ಹುಚ್ಚನಂತೆ ತಿರುಗುತ್ತಲೋ, ಕಂಪಿಸುತ್ತಲೋ
ಹಗಲಿನ ವಿಕಲಾಂಗ ಶಿಶುವಿಗೆ ಜನ್ಮ ಕೊಟ್ಟು ತತ್ತರಿಸಿಬೀಳುತ್ತದೆ.

■

ನವಿಲ ಹೆಣ

ನಾಚಿಕೆಗೇಡು,
ನಲ್ಲೆವಾತಿನ ನಲ್ಲನಲ್ಲೆಯರು
ಮೈ ಮರೆತು ಚೆಂಡಾಟವಾಡಿ
ಹೂಮುನಿಸಿನಲಿ ವಸಂತ ಮುಟ್ಟದ
ಮರವನ್ನು ತಬ್ಬಿ ನಿಲ್ಲುವುದೇಕೋ

ನನ್ನ ನಿನ್ನ ನಡುವೆ
ಯಾವುದೋ ಭೂತವಿದೆ
ಖಂಡಿತ,
ನನ್ನ ಜುಟ್ಟು ನಿನಗಿಟ್ಟು
ನಿನ್ನ ಕ್ರಾವು ನನಗಿಟ್ಟು
ತಮಾಷೆ ನೋಡುವುದು

ಗುರುತಿಗೊಂದು ಬಾಲ
ನರಿಯೊ ತೋಳವೊ
ಪುಚ್ಛ ಗುಚ್ಛವಾಗಿ
ಪ್ರಾಣವ್ಯಗ್ರತೆ ಬಲಿತು
ಭೋಗವಾಗಿ ಮೆರೆವುದು

ಒಲಿದ ಮಿದುವೆದೆ ಈಗ
ರಕ್ತಮಾಂಸದ ಖಂಡ, ತುಂಡು
ಬಿಸಿದು ಸೋಂಕಿನ ಪಂಜರದಲ್ಲಿ ಬೇಗೆ

ಹುಲಿ ಬಂದು ಅಡ್ಡಗಟ್ಟಿ ನಿಂತು
'ತಿನ್ನಲೇ ನಾ ನಿನ್ನ', 'ಮನೆಗೆ ಹೋಗಿ ಹಾಲು ಕೊಡಬೇಕೇನು?'
ಅಂತೆಲ್ಲ ಸೌಜನ್ಯ ತೋರುವುದಿಲ್ಲ ಈಗ

ಏನಿದ್ದರೂ ಹೊಂಚು ಹಾಕಿ
ಕುತ್ತಿಗೆ ಅಮುಕಿ ರಕ್ತ ಹೀರುತ್ತೆ

(೨)

ಗುರುತಿಗೊಂದು ನವಿಲುಗರಿ
ಪುಸ್ತಕದ ಪುಟಗಳಲಿ ತಂಪು ನೆನಪು
ಬೈತಿಟ್ಟ ಪ್ರೇಮ
ಹಸಿರು ನೀಲಿಯ ಮಾಯೆಯಲಿ ಕರಗಿ
ಸತ್ತ ಕಣ್ಣು ಸಾವಿರವಾಗಿ
ಶೂನ್ಯವ ದಿಟ್ಟಿಸಿ
ಕಲಾತ್ಮಕವಾಗಿ ನಗುವುದು!

(೩)

ಏನೋ ಕಂಡು ಹಿಡಿದವರಂತೆ
ಮಹಾ,
ಓ...
ನಿನ್ನ...
ಮೈ ಉರಿಯುವ ಕೋಪದಲ್ಲಿ
ಎಲ್ಲಿಗೆ ಬಂದರೂ ಅಷ್ಟೆ
ಕೆಂಡಸಂಪಿಗೆ ಅರಳುವುದಿಲ್ಲ
ಇಲ್ಲೆಲ್ಲೂ

■

ನಕ್ಷತ್ರ ವಿರದ ರಾತ್ರಿ

ಸಮುದ್ರದ ಮುಂದಿರುವ ಸಾವಿರ ಸೀನರಿಗಳಿಗೆ
ಪರದೆ ಕಟ್ಟಿ ಹೋದೆ ನೀನು
ನಕ್ಷತ್ರಗಳ ಸುಗಂಧವನ್ನೆಲ್ಲಾ ಪೋಣಿಸಿ

ಮನಸ್ಸಿನ ಜಗಿತಕ್ಕೆ ಸೇತುವೆ ಇಲ್ಲ
ಸೋರುವ ಆಕಾಶಕ್ಕೆ ಕುಲಾಯ ಹಾಕಲು
ಅದೂ ನಿಂತಿಲ್ಲ
ಸಮುದ್ರವನ್ನು ನಿಂದಿಸುತ್ತಾ ಕೂಗಿದರೂ
ದನಿ ಕೇಳಲೇ ಇಲ್ಲಾ

ನಕ್ಷತ್ರಗಳನ್ನೆಲ್ಲಾ ಹೊತ್ತು ಮೂಟೆ ಮಾಡಿ
ಹೊರಟೇ ಹೋದೆ ನೀನು
ಸಂಬಂಧಗಳಲ್ಲಿ ನಂಬಿಕೆ ಇರದ ಈ ಗಳಿಗೆ
ಪ್ರೀತಿಸು ಎಂದು ಮತ್ತೆ ಮತ್ತೆ ಕೂಗಲು ನಾನ್ಯಾರು ನಿನಗೆ?

ಕಣ್ಣಿರೆಪ್ಪೆಯ ಬಲೆಯಲ್ಲಿ ಸಿಕ್ಕಿಬಿದ್ದಿದೆ ಕನಸು
ಸಮುದ್ರದಲೆಗಳ ಮೇಲೆ ಸಮಯ ಚಲಿಸುತ್ತಿದೆ
ಮಿಂಚಿನ ಹಕ್ಕಿ ಸಂಚರಿಸಿದೆ ಎದೆಯ ಗೂಡಲ್ಲಿ
ಈ ಬಂಡೆಯ ಮುಖ ಯಾಕೋ ಕಿವುಚಿದೆ

ಸುಕ್ಕು ಬಿದ್ದಿರುವ ಮರುಭೂಮಿಯಂತೆ
ಮಲಗಿದೆ ಸಮುದ್ರ

ಇನ್ನೂ ಇದೆ ನೀ ಚೆಲ್ಲಿದ ನಕ್ಷತ್ರದ ಸುಗಂಧ
ಈ ರಾತ್ರಿ ನನ್ನಂತೇ ಕಪ್ಪಗಿದೆ.

ಯಾವುದೋ ಜಾತ್ರೆಯಲ್ಲಿ
ಕಳೆದುಹೋದ ಮಗುವಿನ ಹಾಗೆ
ದೋಣಿ ತೂಕಡಿಸಿದೆ ದಡದಲ್ಲಿ

ಮೀನು ಕೇಳುತ್ತಿದೆ ಸೇತುವೆಯನ್ನು;
'ಸಮುದ್ರದ ಗೋಡೆಯ ಮೇಲೆ
ಗಿಡದ ನೆರಳನ್ನು ಗೀಚಿದ ಇಂಕ್ ಯಾವುದು?'

■

ಪಾದಗಳಿಂದ ಕಂಗಳಿಗೆ

ಅಮ್ಮ ಹೇಳುತ್ತಾಳೆ
ನಾನು ಚಿಕ್ಕವನಿದ್ದಾಗ ನನ್ನ ಪಾದಗಳು
ಅಪ್ಪಟ ಚಂದಿರನ ಪ್ರತಿರೂಪದಂತಿದ್ದವಂತೆ
ಈಗಲೂ ಹೇಳುತ್ತಾಳೆ
ನನ್ನ ಪಾದಗಳಲ್ಲಿ ಬೆಳದಿಂಗಳ
ತುಣುಕೊಂದು ಹೊಳೆಯುತ್ತಿದೆಯಂತೆ
ಅದು ಮತ್ತೆ ಪಾದಗಳಿಂದ ಕಂಗಳಿಗೆ ಹರಿಯುತ್ತದಂತೆ!

ನಾನು ಸುಮ್ಮನೆ ಅಮ್ಮನನ್ನು
ರೇಗಿಸುತ್ತೇನೆ
ಚಂದ್ರನ ತುಣುಕೇ ಯಾಕಾಗಬೇಕು
ಪರಾವಲಂಬಿ ಬೆಳಕು
ಇದ್ದರೆ ಸೂರ್ಯನೇ ಇರಲಿ ಬಿಡು ಎಂದು.

ಅವಳು ಸುಮ್ಮನಿರಬೇಕಲ್ಲ
ಸೂರ್ಯನಾದರೆ ಸುಟ್ಟು ಕರಕಲಾಗುತ್ತೇನಂತೆ
ಅಥವಾ
ಸುತ್ತಲಿನವರನ್ನು ಸುಡುತ್ತೇನಂತೆ

''ನಿಮ್ಮಪ್ಪನ ಮುಖದಲ್ಲಿರುವ
ಸೂರ್ಯ ಸಾಕು ಬಿಡು
ನಮ್ಮ ಕುಲಕ್ಕೆಲ್ಲಾ ಆಗುತ್ತೆ'' ಹೀಗೆಂದು ಸುಮ್ಮನಾದಳು.

ಅಮ್ಮ ಹೇಳುವುದು ನಿಜವಾದರೆ

ನನಗ್ಯಾಕೆ ಈ ಬೆಳದಿಂಗಳ ತುಣುಕು
ಇದುವರೆಗೂ ಕಾಣಿಸಿಲ್ಲ
ಜತೆಗೆ ನಾನೇ ಎಂದೂ ನನ್ನ ಪಾದಗಳನ್ನು ನೋಡಿಕೊಂ-
ಡೂ ಇಲ್ಲ
ಇತರರು ನೋಡಿರಲಿಕ್ಕೂ ಸಾಧ್ಯವಿಲ್ಲ
ಏಕೆಂದರೆ ನಾನು ಸದಾ ಶೂಗಳನ್ನು ಹಾಕಿರುತ್ತೇನೆ.

ಮೊನ್ನೆ ಹೀಗೇ ಕುತೂಹಲಕ್ಕೆ
ಚಂದಿರನ ನೋಡಲೆಂದು ಮನೆ ಮೇಲೆ ಹೋಗಿ
ಚಂದಿರನನ್ನೆ ದಿಟ್ಟಿಸಿ ನೋಡಿದೆ
ಅವನು ಸುಮ್ಮನೆ ನಗುತ್ತಲಿದ್ದ ಅಮ್ಮನ ಪಾದದಂತೆ ಕಂಡ
ಮತ್ತೆ ನನ್ನ ಪಾದವನ್ನೊಮ್ಮೆ ಮೊದಲ ಬಾರಿ
ನೋಡಿಕೊಂಡೆ
ಬೆಳದಿಂಗಳು ಅಲ್ಲಿ ಪ್ರತಿಫಲಿಸಿ ನಕ್ಕಿತು.

ಅಮ್ಮನ ಪಾದಗಳನ್ನೊಮ್ಮೆ ನೋಡಬೇಕೆನಿಸಿ
ಒಳಹೋಗಿ ಅವಳೆದುರು ನಿಂತೆ
ಅವಳ ಕಂಗಳಲ್ಲಿ ಬೆಳದಿಂಗಳು ಒಸರುತ್ತಿತ್ತು.

■

ಪಂಚಭೂತ

ಕೋಟಿ ಜೀವ ಕೊಳೆತರೂ
ಕೋಟಿ ಚಿಗುರು ಮೊಳೆತರೂ
ಗಂಧವಿಲ್ಲ ಮಣ್ಣಿಗೆ

ಎಷ್ಟು ಧೂಳು ಎದ್ದರೂ
ಹೂವಗಂಧ ಹೊದ್ದರೂ
ಗಂಧವಿಲ್ಲ ಗಾಳಿಗೆ

ಎಷ್ಟು ಕೊಳೆಯ ತೊಳೆದರೂ
ಎಷ್ಟು ಮಣ್ಣ ಕೊರೆದರೂ
ಗಂಧವಿಲ್ಲ ನೀರಿಗೆ

ಎಷ್ಟು ಕೊಳ್ಳಿಯಿಟ್ಟರೂ
ಎಷ್ಟು ಹೆಣವ ಸುಟ್ಟರೂ
ಗಂಧವಿಲ್ಲ ಬೆಂಕಿಗೆ

ಲಕ್ಷ ಚುಕ್ಕಿ ಹೆತ್ತರೂ
ಕೋಟಿ ಭೂಮಿ ಹೊತ್ತರೂ
ಗಂಧವಿಲ್ಲ ಬಾನಿಗೆ

ಒಂದು ಕೊಳೆತ ಭಾವ ಸಾಕು
ಮನಸು ಮೈಲಿಗೆ
ಎಷ್ಟು ಹೊತ್ತು ಕಾದೀತು
ಪಾಪ ಮಲ್ಲಿಗೆ

ಬದುಕ ಬೇರಿನ ಸುತ್ತ

ರಟ್ಟೆ-ಹೊಟ್ಟೆಯ ನಡುವೆ
ಹೆಣೆದ ನರಗಳ ಜಾಲ
ಬೆಸೆದ ಮೂಳೆಯ ಕುಣಿಕೆ,
ಹಗಲಿರುಳ ಹಸಿವಲಿ
ಬಸಿದ ಬೆವರಲಿ
ಬದುಕು ಬೀಜದ ಮೊಳಕೆ

ಕಷ್ಟವೆಂಬುದು
ತೊಟ್ಟ ಬಟ್ಟೆಯ ಚಿಂದಿ
ಆನಂದವೆಂಬುದು
ಉಂಡು ತೇಗಿದ ಅನ್ನ
ತೇದ ದೇಹಕೆ
ಬಂದುದೆಲ್ಲವೂ
ಸುಖವೇ,
ಕಂಡು ಖುಷಿಯಾಗುವ
ಆಕಾಶಕೆ ಇರುಳೆಲ್ಲ
ಮುಗುಳುನಗೆ

ಹಸಿರು ಬೆಟ್ಟದ ನಡುವೆ
ಸವೆದ ಹಾದಿ
ಹಾದಿಹಾದಿಗೂ ನಡುವೆ
ಊರುಗಳ ಕೊಂಡಿ
ಕೊಂಡಿ ಕೊಂಡಿಗಳಲ್ಲಿ
ಬೆಸೆದ ಮೌನದ ಒಳಗೆ

ನಿತ್ಯ ಜಿನುಗುವ ಒರತೆ
ಸುತ್ತ ಚಾಚಿದ ಬೇರು.
ಯಾವುದೋ ಅಲೆದಾಟದಲಿ
ಕಳಚಿ ಹೋಗುವ
ಜನರು
ತೊರೆದ ಬೇರಿಗೆಲ್ಲಿದೆ ಊರು?
ಓಡುವ ಕಾಲುಗಳಲ್ಲಿ
ಹಳೆಯ ಮಣ್ಣಿನ ಕಂಪು,
ತೆರೆದ ಹೆಬ್ಬಾಗಿಲಿನಾಚೆ
ಆಸೆಯೆಂಬುದು ನಗರಗಳ
ರಸ್ತೆ.

ಬೇರು ಬಿಟ್ಟ ಜೀವಗಳ
ಕೊನೆಯಿರದ ಹಾಡು,
ಕವಿದ ಕತ್ತಲಲಿ
ನಿರೀಕ್ಷೆಯೆಂಬುದು ಬೆಳಕು
ದೇಹವೆಂಬುದು ಹಣತೆ
ಕನಸುಗಳೇ ತೈಲ!

■

ಬುಗುರಿ ಮತ್ತು ಬೆರಳು

ಪ್ರಶ್ನೆ
ಅಲ್ಲಲ್ಲೇ ಸುತ್ತುವ ಅಕ್ಷದ್ದೇ
ಪ್ರಶ್ನೆ
ಕೊರಳ ಸುತ್ತ ಬಿಗಿಯುವ ದಾರದಲ್ಲೇ
ಪ್ರಶ್ನೆ
ದಾರ ಸುತ್ತುತ್ತಿರುವ ಬೆರಳುಗಳದ್ದೇ
ಪ್ರಶ್ನೆ
ಇವೆಲ್ಲದರಿಂದ ಗೊತ್ತಿದ್ದೂ ಪಾರಾಗಲಾರದ
ತನ್ನತನದ್ದೇ
ಉತ್ತರ ಗೊತ್ತಿಲ್ಲದೆ ಏನಿಲ್ಲ
ಯಾರೂ ಈ ಎಲ್ಲದರಿಂದ ಪಾರಾಗುವಂತಿಲ್ಲ
ಸುತ್ತಿಸಿಕೊಂಡು ಗರಗರನೆ ತಿರುಗುವ
ಬುಗುರಿ ಕೇಳುತ್ತಿದೆ
ಸುತ್ತುವ ಬೆರಳೇ ನೀನೇಕೆ
ಮಿಡಿಯಲಾರೆ?

■

ಬೂದಿ ಮಾತ್ರ ಬಲ್ಲದು
ಬೇಯುವ ಬಗೆಯನ್ನು

ಜೀತಗಾರ ತನ್ನ ತಾತ ಒಮ್ಮೆ ಬಾಯಾರಿದ
ದನಕರುಗಳನ್ನು ಕೆರೆಯಂಚಿಗೆ ಬಿಟ್ಟು
ತಾನೂ ಒಂದು ಬೊಗಸೆ ಮೊಗೆದು ಕುಡಿದ
ಊರ ತುಂಬ ಹಬ್ಬಿತು
ಕೆರೆ ಮೈಲಿಯಾಯಿತೆಂಬ ಸುದ್ದಿ
ಯಜಮಾನ ಜನ ಅವನ ಹಿಡಿದು
ಉರಿವ ಮೆದೆಯೊಳಗಿಕ್ಕಿ ಜೀವಂತ ಸುಟ್ಟರು.

ಆ ಬೆಂದ ಬೂದಿಯನ್ನು ತೂರಲಾರದೆ ಭೂಮಿತಾಯಿ
ಗುಡುಗಾಗಿ ಬರಸಿಡಿಲಾಗಿ ಬಿಕ್ಕಿ ಬಿಕ್ಕಿ ಅತ್ತಳು ಆ
ಆಕಾಶರಾಯ ಮಳೆಯಾಗಿ ಬಂದು ಸಂತೈಸಿದ
ಆ ಆಗ ಬೂದಿ ಮುಚ್ಚಿದ ಕೆಂಡವಾಗಿ
ಅಪ್ಪ ಹುಟ್ಟಿದ.

ಮತ್ತೆ ಜೀತಗಾರನಾದ ನನ್ನ ಅಪ್ಪ ತನ್ನಪ್ಪನ ನೆನೆದು
ಅಂಥದೇ ಒಂದು ಸಂತಾನಕ್ಕಾಗಿ ಬೇಡುತ್ತಾ
ದೇವಸ್ಥಾನದ ಅಂಗಳಕ್ಕೆ ಕೈಚಾಚಿ ಅಡ್ಡ ಬಿದ್ದ
ದೇವರು ಮೈಲಿಗೆಯಾದನೆಂಬ ಸುದ್ದಿ
ಊರ ತುಂಬ ಹಬ್ಬಿತು
ಯಜಮಾನ ಜನ ಗುಡಿಸಲಿಗೆ ಬೆಂಕಿ ಇಟ್ಟು
ನಿದ್ದೆಯಲ್ಲಿದ್ದ ಅಪ್ಪನ ಅಸ್ಥಿಪಂಜರವ ದಹಿಸಿದರು.

ಮತ್ತೆ ಸುಟ್ಟ ಬೂದಿಯಲ್ಲಿ ಕುಟುಕುತ್ತಿತ್ತು ಜೀವ
ಭೂಮಿತಾಯಿ ಭೂಕಂಪನವಾಗಿ ಬಿಕ್ಕಿ ಬಿಕ್ಕಿ ಅತ್ತಳು ಆ
ಸಮುದ್ರ ಪ್ರವಾಹವಾಗಿ ಬಂದು ಸಂತೈಸಿದ
ಆ ಆಗ ಜ್ವಾಲಾಮುಖಿಯಾಗಿ
ನಾನು ಹುಟ್ಟಿದೆ.

ಈಗ ನನ್ನವರು ಸುಡಲಾರರು
ನನ್ನ ಒಡೆಯಲು ಬಂದು ತಾವೇ ಸುಟ್ಟುಕೊಳ್ಳುವರು
ಯಾಕೆಂದರೆ ನಾನು
ಅಜ್ಞಾನವನ್ನು ಸುಡುವ ಅಕ್ಷರವಾಗಿದ್ದೇನೆ.
ಸಾವಿಲ್ಲದ ಸತ್ಯಕ್ಕೆ ಸಾಕ್ಷಿಯಾಗಿದ್ದೇನೆ.

■

ಭಗವಂತ

ಯಾವುದೋ ಧ್ಯಾನಲ್ಲಿ
ಎದುರನ್ನು ನೋಡದೆ ಮೈಮೇಲೆ
ತಳ್ಳಿದಂತೆ ಬಿದ್ದುದಕ್ಕೇ
ಕಲ್ಲಿನಂತೆ ನಿಂತಿದ್ದ ಆ ದಾರಿಹೋಕ
'ಸರಿಯಾಗಿ ಮುಂದೆ ನೋಡುತ್ತ
ನಡೆಯೋ ಭಗವಂತ'
ಎಂದು ಇಹದ ಅರಿವಾಗುವಂತೆ
ಆ ಕ್ಷಣ ನನ್ನ ದೇವರಾಗಿಬಿಟ್ಟ.
ಬಳಿಕ, ಅದನ್ನೇ ತಿರಸ್ಕಾರದಿಂದ
ನೋಡಿದ್ದ

ಇರಲಾರದು ಭಗವಂತ
ಎನ್ನುವುದು ಅಣ್ಣ, ಅಪ್ಪ ಎಂಬಂತೆ
ಯಾವುದು ಈ ಸಂಬೋಧನೆ
ಏನಿದರ ಗೂಢಾರ್ಥ ತಿಳಿಯದೆ
ಅರ್ಥ ನೋಟದಲ್ಲಿ ಅವನ ದಿಟ್ಟಿಸಿದ್ದೆ

ಯಾರನ್ನಾದರೂ ದೇವರಾಗಿಸುವುದು
ಆ ಪದವ ಬೈಗುಳದಂತೆ ಬಳಸುವುದು
ಬಲ್ಲವರು ಹೇಳಬಹುದು – 'ಅದು ಸಲ್ಲದು'

ಮನ್ನಿಸಬಹುದಿತ್ತು ಅವಸರದಲ್ಲಿ
ದೇವರು ಮಾಡಿದ ತಪ್ಪನ್ನು
ಈ ಮನುಷ್ಯ ಮಾತ್ರದವನು

ದೇವರು ಏನೂ ಮಾಡಲಾರ ಎಂದೇ
ನನ್ನ ಸರ್ವಶಕ್ತನಾಗಿಸಿದ್ದ ಈ ತಂದೆ.

ಮತ್ತsದs ಹಾಡು

ಮತ್ತsದs ಹಾಡು
ಬೆಳಗ್ಗೆ ಯೋಳಕ್ಕೆ ಇಕೀ ಸಾಲಿ
ಅಷ್ಟರಾಗ ಪ್ರೆಶರ್ ಇಳದು ಬೇಯಬೇಕು, ಅನ್ನಾ– ಬ್ಯಾಳಿ

ಮುಸರಿ–ಒಗೂಣಾ – ಸ್ನಾನಾ – ಪಾರಾಯಣಾ,
ಒಂಬತ್ತಕ್ಕೆ ತಾಟು, ಹತ್ತಕ್ಕ ಹಾಜರೀ
ಫೈಲು– ಫೋನು, ಬಿಲ್ಲು–ಚಲನ್ನು
(ಗಣರಾಜ್ಯದ ಸಂತ್ಯಾಗೂ ಪರಾಜಾಗದ ಗುಜರೀ)
ಸಂಜೀ ಆರಕ್ಕೆ ಸಹಿ, ಸಮಾರೋಪ,
'ಅಸ್ಮಿತಾ' ಅನಕೋತನ ಒಂದಿಷ್ಟು ಕಾಯುಪಲ್ಯಾ, ಕಿರಾಣಿ,
ಬಂದ ಮ್ಯಾಲ ಗಿರಣಿ,
ಪೌಣೀ ಆಠರ ಸುದ್ದಿ, ಹತ್ತರ ಧಾರಾವಾಹಿ
ಯಾರದೋ ಜಂಗಮ – ಧ್ವನಿ,
(ಬೇಕಾದಪ್ಪು ಹೊಡಿರಿ ಮಾತಿನ ಚೈನೀ)
ಮೈ ನೆಲಕ್ಕ, ಮನಸಿನ ತಳಕ್ಕ, ಎಲ್ಲಾ ಲೆಕ್ಕ
ಚುಕ್ತಾ ಇರುತ್ತದ, ಪೈ, ಪಾವ, ಆಣೆ.
ಕಣ್ಣ ಮುಚ್ಚಿದರೂ ಅದs ಮೆರವಣಿಗಿ
ಡಿಸೆಂಬರ ಬಂತಂದ್ರ ಹುಚ್ಚೆದ್ದು ಹೂ ಬಿಡ್ತದ
ಹಿತ್ತಲದಾಗಿನ ಮಾವಿನ ಮರಾ
(ಏನದನೋ ಏನೋ ಅದರ ವಿಚಾರಾ)
ಮಳೀ ಛಾಳ ಆತು, ಥಂಡೀನೂ ರಗಾಡ ಅದ
ಇದ್ದೀತು ಮುಂದ ಉರಿಬಿಸಿಲಿಂದೂ ಉರವಣಿಗಿ
ಛಲೋ ಅವ ಬೆಳಿ, ಸೋವಿ ಆದಾವು ಜ್ವಾಳಾ
ಹಳೀ ಕಂತು ಮುಟ್ಟಿದ್ರ, ಹುಟ್ಟೀತು ಹೊಸಾ ಸಾಲಾ
'ಸೋಲಾ – ಆಣೆ ಅಂದರೂ.

೧

ಹೊಸಾ ಬಾಂಡಿಗೆ ಹೊಸ ಜಾಮೀನು ಕೇಳಾವ್ರಽ ಬಾಳಾ,
ತಪ್ಪ ತಿಳೀಬ್ಯಾಡಾಽ ಕಾಲಾ,
ಮುಂದಿನ ಮೇ ದಾಗಲ್ಲಽ; ಮಂದೀ– ಮದಿವಿ
ನಡಬರಕ ಬರ್ತದೇನೋ ಹೋದ ವರ್ಷ ಹೋದಾವ್ರ
ಅಬ್ಧಿ–ಪೂರ್ತಿ
ಪಾಪ, ಹಿಂಗಾಗಬಾರದಿತ್ತು
ಸಣ್ಣ ಬಾಯಿ, ದೊಡ್ಡ ತುತ್ತು
ಜಗದ ತಮ್ಮಾ, ಹಾಂಗಽ ಹ್ಯಾಂಗ ನೀಗೀತೋ ತಮ್ಮಾ?
ಬಗೀಲಾರದ ಯುಗದ ಬ್ಯಾಸ್ಯಾಗ ವರ್ತಿ,
ನಮ್ಮದ ಕೆರೀ, ನಮ್ಮಽದ ಹಾರ, ನಮ್ಮಽದ ಹಾಡು ಭರ್ತಿ

ಹಾಂಗಽ ಸಣ್ಣಾಂಗ ಅಳಕ್ಕಽ ಇಳದ್ರ
ಹೋದ ವರ್ಷ ಇದಽ ದಿನದಾಗಲ್ಲ
ಆಪರೇಶನ್ ಆದದ್ದು
ಒಳಗ ಕೊಯ್ಯಲಿಕ್ಕೆ ಹೊರಗ ಭೂಲ್ ಕೊಟ್ಟಿದ್ದು
(ನನ್ನದಽ ನನ್ನದಲ್ಲ ಅನಿಸಿದ್ದು)
ಆ ಮ್ಯಾಲೆ ಅಂತ ಕಾಣಸ್ತಽದ ಅಕಾಡೆಮಿ ಸೆಮಿನಾರು
ತಿರತಿರಗಿ ಬಂದ್ರೂ, ತಿರುವನಂತಪೂರದಾಗ ಕಂಡದ್ದೇನು?
ಕಡಿಗಿ ನಿಂತ ಕಡಲಿಗೆ ಘಳಿಗಿಗೊಮ್ಮೆ ಪಸಾರ ಹೊಸಾದು
ಹಡಿಯೋ ಚಟಾ,
ಅಂತಽ, ಏನೋ ಬ್ಯಾನೀ ತಿಂದ್ಯಾವ್ರಾಂಗ ಪ್ಲ್ಯಾನು,
ಕವಿತಾ–ಭಾಷಣಾ, ಎಲ್ಲಾ ಆತು.
ಮಸ್ಕತ್ ಹಾಟೆಲ್ಲಿನ್ಯಾಗ ದಸ್ಕತ್ ಮಾಡೋವಾಗ
ಮಾನವತಾವಾದ ಏನು ಮೇಯಲಿಕ್ಕೆ ಹೋಗಿತ್ತು?

ಅಂತೂ ತಿರಗಿ ಬಂದೇನಿ
ತೆತ್ತಿಸ್ ಕೋಟಿ ದುರಗ – ಮುರಗ್ಯಾರ ಭಡಲ್ ಬಾರಿನ್ಯಾಗ
ಚೌರ್ಯಾಂಸಿ ಲಕ್ಷದ ಗುದ ಮುರಗ್ಯಾಗ,
ಸಂಜೀ ಮುಂದ ಮೊಮ್ಮಗಳು ಬರ್ತಾಳ
ಮಿಸ್ ಹೇಳಿದ ಮನೀ – ಪಾಠ ಮಾಡಲಿಕ್ಕೆ,
‘ಸಾಕು ಬಿಡು ಅಜ್ಜಾ ತಗದಿಡು ನಿನ್ನ ಆ ಕವಿತಾ–ಗಿವಿತಾ
ಆಡೂಣು ಹೊಸಾ ಆಟಾ, ಮೌಸು, ಎಟಿಎಮ್ಮು,
ಮೊಬ಼ಾಯಿಲು ಜೋಡಿಸಗೋತಾ’
ರೈಮು–ರಿದಮ್ಮುಗಳ ನಡುವ ಅರಳೋ ಈ ಹೂವು
ಏನ ಛಂದ ಹಾಡ್ತಾಽವ

‘ಲಂಡನ್ ಬ್ರಿಜ್ ಇಜ್ ಫಾಲಿಂಗ್ ಡೌನ’
ಆಗಾಗ ಮೆಗಾ ಕರುಳಿನ ಮಗಾ ಬರ್‍ತಾನ
(ರಿಟರ್ನ ಟಿಕೆಟ್ಟೂ ಅಂವಾಽ ಮೊದಲ ತಗೊಂಡಿರ್‍ತಾನ)
ಊರು ದೊಡ್ಡದಾಗಿಂದ ದೂರ ಹೆಚ್ಚಾಗೂದಽನ
ರಾತ್ರಿಗೆ ರಿಝರ್ವೇಶನ್ ಮಾಡಿಕೊಂಡ ಮಂದಿ
ಬೆಳಿಗ್ಗೆ ಎಲ್ಲಿರ್‍ತಾರ? ಅನ್ನೋ ಚಿಂತಿಗೂ ಅರ್ಥಯಿಲ್ಲಾ
ಅನ್ನೋದನ್ನ ಅರ್ಥ ಮಾಡಿಕೊಳ್ಳೋ ಹೊತ್ತು ಬಂತು
ಆದರೂ ಬೆಳಗಿನ ಹಾಡು ಚಿಗೀತು
(ಮುಳ್ಳುಗುರು ಕಳ್ಳು ಬಗೀತು)
ಮತ್ತ ‘ಡ್ಯೂ’ ಆತು, ಹೊಸ ಸಾಹೇಬ್ರು ಎಲ್ಲ ಹಾಕ್ತಾರೋ ಏನೋ,
ಚಾವಽಡ್ಯಾಗ ಕೂತು, ಚಗಳಾ ಹಾಕ್ತಾರ ವಿಮರ್ಶಕರು
‘ಮತ್ತದ ಹಾಡು’
ಎಲ್ಲ ಹೋದ್ರು ಮತ್ತಽದಽ ಹಾಡು

ಬೆಳಗ್ಗೆ ಯೋಳಕ್ಕೆ ಇಕೀ ಸಾಲಿ
ಅಪ್ಪರಾಽಗ ಪ್ರೆಶರ್ ಇಳಿದು ಬೇಯಬೇಕು ಅನ್ಸ್ಯಾ – ಬ್ಯಾಳಿ.

■

ಮಾತುಗಳ ಸುಟ್ಟವರು

ಮಾತುಗಳ ತೂರಿ
ಜೊಳ್ಳುಗಳ ಗುಡಿಸಿ
ಅಲ್ಲಿಗೆ ಒಯ್ಯಬೇಕೆಂದು
ಗಟ್ಟಿ ಬೀಜಗಳ ಕಲೆ ಹಾಕಿದ್ದೆ

ಅವು ಅಕಸ್ಮಾತ್
ನೀರಿಗೆ ಬಿದ್ದು ಒದ್ದೆಯಾದವು!
ಅಂಗಳದಲ್ಲಿ ಒಣಗು ಹಾಕಿದೆ
ಕಟ ಕಟ ಒಣಗಿದ ಅವುಗಳು
ಎದುರಾಳಿಯ ಸೊಕ್ಕು ಮುರಿದೇವೆಂದು
ಠಣಗುಡುತ್ತಿದ್ದವು!

ನನ್ನ ಕಣ್ತಪ್ಪಿಸಿ
ಒಣಗಿದ ಮಾತುಗಳಿಗೆ
ಅವರು ಬೆಂಕಿ ಇಟ್ಟರು
ಅವು ಬೂದಿಯಾದವು!

ನಾನು ಸುಟ್ಟವರಿಗೆ ನಮಿಸಿದೆ
ಅಷ್ಟು ತೂಕದ ಮಾತುಗಳ ಹೊತ್ತು
ಅಲ್ಲಿಯವರೆಗೆ ಸಾಗುವುದು ಹೇಗೆಂದು
ಯೋಚಿಸಿ ನಿತ್ರಾಣವಾಗಿದ್ದೆ
ಈಗ ನಿರಾಳ, ಇಷ್ಟೇ ಇಷ್ಟು
ಬೂದಿಯನ್ನು ಆರಾಮಾಗಿ ಒಯ್ಯಬಲ್ಲೆ!

ಅವರ ಕ್ರೌರ್ಯವನ್ನು ನೋಡುತ್ತಿದ್ದರೆ
ಈ ಬೂಧಿಯೊಳಗಿನ ಮಾತುಗಳು
ದಿಗ್ಗನೆ ಎದ್ದು ಕ್ರಾಂತಿಯ ಬೀಜಗಳಾಗುವುದಿಲ್ಲ
ಎಂದು ಹೇಗೆ ಹೇಳಲಿ?

ಸೂರ್ಯನ ನೆರಳು

೧

ಲೋಕದಲ್ಲಿರೋದು ಏಕಮೇವ ಸತ್ಯವಂತ್ರೋ
ಅಂತೆ ವಿಶ್ವಕೊಬ್ಬನೇ ಸೂರ್ಯ – ಅದು ನಾನೇ!
ಅಂತ ಕೊಚ್ಚಿಕೊಂಡ ಸೂರ್ಯನನ್ನು ಕೇಳಿದಳಂತೆ
ಸಂಜ್ಞೆ ಎಂಬ ಮಡದಿ :

ಅರ್ಧಾಂಗಾದೀತು ಪತಿದೇವನೇ
ಪ್ರೀತಿಗೆ ಎರಡಾದರೂ
ಸಂದೇಹಕ್ಕೆ ಸಾವಿರ ಸತ್ಯಗಳಲ್ಲವೆ?

ಹೆಂಗಸು ಬುದ್ಧಿಗೆ ಹೊಳೆವುದಿಷ್ಟೆ ಎಂದು
ಸುಮ್ಮನಾದರು ಸೂರ್ಯನಾರಾಯಣ ಸ್ವಾಮಿ.
ಸುಮ್ಮನಾಗಲಿಲ್ಲ ಮಡದಿ!

ಭೂಮಿಯ ಮ್ಯಾಲಿನ ತನ್ನ ನೆರಳಿಗೇ
ಜೀವ ಭರಿಸಿ 'ಛಾಯೆ' ಎಂದು ಹೆಸರು ಕೂಗಿ
ನೀನು ನನ್ನಂತಾಗಿ ಗಂಡನ ಕೂಡೆಂದು
ಕಳಿಸಿದಳು ಸೂರ್ಯನ ಬಳಿಗೆ.

ಹುರಿಗೊಂಡ ಬುಗುರಿ ಸೂರ್ಯ
ಅಸಲಿ ನಕಲಿಗಳ ಗುಟ್ಟು ತಿಳಿಯದೆ
ನೆರಳಿನ ಒಳಸುಳಿಗಳ ಸೆಳೆತಕ್ಕೆ ಒಳಗಾಗಿ
ಕೂಡಿಯೇ ಬಿಟ್ಟ ನೆರಳಿನ ಜೊತೆಗೆ!

ಎಷ್ಟೆಂದರೂ ಭೂಮಿಗೆ ಹುಟ್ಟಿದ ಚಂಚಲ
ನೆರಳಲ್ಲವೇ ಛಾಯೆ?
ಗಂಡ ಸನಿಹದಲ್ಲಿದ್ದಾಗ ವಿನಯದಲಿ
ಕರಗಿ ಕಾಣದಿದ್ದವಳು
ದೂರದಲ್ಲಿದ್ದಾಗ ಬೆಳೆದು ಅರ್ಧ ಭೂಮಿ
ಯನ್ನ ಆವರಿಸಿದಳು!

ನೆರಳು ಕೆನೆಗಟ್ಟಿ ಕತ್ತಲಾಗುವ ಮಡದಿಯರ
ಗುಟ್ಟು ಕೊನೆಗೂ ತಿಳಿಯಲಿಲ್ಲ ಬೆಳಕಿನ ದೇವರಿಗೂ

ಲೋಕವ ಬೆಳಗುವ ಬೆಳಕಿಗೆ
ಭೂಮಿಯ ಬುಡ ಕಾಣದ ಕುರುಡು!

೨

ಇಷ್ಟಾಯಿತಲ್ಲ ಸೊಂಟದ ಬಿಸಿ ಆರಿದ ಮ್ಯಾಲಾದರೂ
ಮಡದಿಯ ನಿಜ ತಿಳಿದನ?
ಕೂಡಿದ ನೆರಳು ಮೂಲವಲ್ಲ ಎಂದನರಿತನ?
ಬಿಡು ದೇವರ ವಿಷಯ ನಮಗ್ಯಾಕೆ?

ಇತ್ತ ಛಾಯೆಯ ಹಸನಾದ ಮೋರೆಯಲಿ
ಶಿಶು ಜನನದ ಬೇನೆ ತಲೆದೋರಿ

ಮೂಡುಬೆಟ್ಟದ ತುಂಬ ಬಾಣಂತಿಯ ಸಡಗರ!
ಕೋ ಅಂತ ಬೆಳಗಿನ ಕೋಳಿ ಕೂಗಿ
ಸೂರ್ಯದೇವರು ಕದ ತಟ್ಟಿದರೆ ಅಗೋ ಅಗೋ –
ಬೊಗಸೆ ತುಂಬ ಮುಂಜಾನೆಯ ಹಿಡಿದುಕೊಂಡೇ
ಬಂದವೆರಡು ಮಕ್ಕಳು; ಶನಿ ಮತ್ತು ಯಮ!
ನಮ್ಮನ್ನು ಕಾಡುವುದಕ್ಕೆ ಇನ್ನೆರಡು ಸತ್ಯಗಳು!

೩

ಈಗ ಹೇಳು: ಲೋಕದಲ್ಲಿರೋದು ಒಂದು ಸತ್ಯವ?
ಹಗಲಿಗೊಂದೇ ಕಣ್ಣಾದರೆ ಕತ್ತಲೆಗೆ ಸಾವಿರ!
ಹಗಲಿಗೆ ಒಂದೇ ಸತ್ಯವಾದರೆ ಕತ್ತಲೆಗೆ
ಕಣ್ಣು ಹೊಡೆದು ಚಳ್ಳೇಹಣ್ಣು ತಿನ್ನಿಸುವ
ಸತ್ಯಗಳು ಸಾವಿರಾರು!

ಚಿತೆಯ ಗತಿಗಾಣದ
ಅನೇಕ ನಕ್ಷತ್ರಗಳು ಸತ್ತಿದ್ದಾವೆ ಆಕಾಶದಲ್ಲಿ!
ನಮ್ಮ ಪಾಲಿಗಿನ್ನೂ ಅವುಗಳ ಬೆಳಕಿದೆ.
ಕೆಲವು ಇತ್ತೀಚೆಗೆ ಹುಟ್ಟಿದ್ದಾವೆ
ಅವುಗಳ ಬೆಳಕಿನ್ನೂ ತಲುಪಿಲ್ಲ ನಮಗೆ!
ಸೂರ್ಯನಿಗೆ ಇದ್ಯಾವುದರ ಅರಿವೂ ಇಲ್ಲ!

ಹೋಗಲಿ ಆಕಾಶದ ನೆಲೆಗಟ್ಟು ನೀಲಿ ಎಂದನಲ್ಲ ಸೂರ್ಯ,
ಆದಾದರೂ ನಿಜವೇ ಹೇಳಿ.
ಸೂರ್ಯನಿಗೆ ಕ್ಯಾರೇ ಅನ್ನದ, ಅವನಿದ್ದಾಗ ನಂದಿ
ಇಲ್ಲದಾಗ ಬಡಿವಾರ ಮಾಡುವ ತಾರೆಗಳೆಷ್ಟೋ ಇವೆ
ನಮ್ಮೀ ವಿಶ್ವದಲ್ಲೆ! ಅದು ಗೊತ್ತೆ ರವಿಗೆ?
ಇದೂ ಹೋಗಲಿ, ಸೂರ್ಯನೂ ಒಂದು ದಿನ
ಇದ್ದಿಲಾಗುವ ತಾರೆ ತಾನೆ? ಬಿಡು ಬಿಡು.
ಮೂಲವೆಂದು ಭ್ರಮಿಸಿ ನೆರಳಿನೊಂದಿಗೇ
ಸಂಸಾರ ಮಾಡಿದವನಿಗೆ
ಕಣ್ಣವೆಯೆಂದು ನಂಬುವುದು ಹ್ಯಾಗೆ?

ಸೂರ್ಯನಿಗೆ ಬಿದ್ದ ನಮ್ಮೀ ನೆರಳು
ನಮ್ಮ ಸತ್ಯದ ತಿರುಳು!
ಇಷ್ಟು ತಿಳಿದರೆ ಸಾಕು.

■

ಶರಣೆಂದವೋ ಪದವು ಶರಣೆಂದವೋ

ಅಪ್ಪನ ಹೆಣ ಹೊತ್ತು ಹೆಗಲು ನೋವಾಗಿರಲು
ಅವಳ ಕೆನ್ನೆಯ ಹೂವುಗಳು ಮುದ್ದಾಗಿರಲು

ಸಮಸ್ತ ಭಾಷೆಯ ಒಂದು ಪುಟ್ಟ ಪದ
ಆವರಿಸಿರಲು
ಆ ಒಂದು ಪುಟ್ಟ ಪದವ ಕವಿತೆ
ಅವಿತಿಟ್ಟುಕೊಂಡಿರಲು

ಯೋನಿಯ ರಕ್ತ ಜಲದಲಿ
ಜೀವ
ಪಿಳಿಪಿಳಿ ಕಣ್ಣು ಬಿಟ್ಟಿರಲು

ಸಮಸ್ತ ಭೂಮಂಡಲವೇ ಉರಿವ ಸೂರ್ಯನ ಸುತ್ತ
ಸುತ್ತುತ್ತಿರಲು

ಪುಟ್ಟ ಪದವ ಕವಿತೆ
ಹೊತ್ತೊಯ್ದಿರಲು

ರಂಗನ ತಿಟ್ಟಿನಿಂದ ನಯಾಗರದವರೆಗೆ
ಮೂಲೆಯಿಂದ ನಭೋ ಮಂಡಲದ ಮುಗಿಲವರೆಗೆ
ಸಹಾರದಿಂದ ಅರಬ್ಬೀ ಕಡಲ ತೀರದವರೆಗೆ
ವಲಸೆ ಹಕ್ಕಿಯಾಗಿ ಹಾರುತಿರಲು

ಕಾಕಾ ಹೊಟೇಲಿನ ಬೈಟೂ ಟೀ ಗಳಲಿ
ಹರಟೆ ಹೊಡೆಯುತಿರಲು

ಅಮ್ಮನ ಬಳೆಗಳಲಿ ಅಜ್ಜಿಯ ಸುಕ್ಕುಗಳಲಿ
ಕುಣಿದೇ ಕುಣಿಯುತಿರಲು
ಕುಣಿದೇ ಕುಣಿಯುತಿರಲು

ಪಂಕ್ಚರ್ ಆದ ಸೈಕಲ್ ಟ್ಯೂಬಿನಲಿ
ನಗುತ ನಲಿಯುತ ಲಾಸ್ಯವಾಡುತಿರಲು

ರಪರಪ ಮಳೆಯಲಿ ರಣರಣ ಬಿಸಿಲಲಿ ಚುಮುಚುಮು ಚಳಿಯಲಿ
ಬುದ್ಧನಾಗಿ ಧ್ಯಾನಿಸುತಿರಲು
ಸುನಾಮಿಯ
ಸಾವಿನ ಮನೆಯ
ಸಾಸುವೆ ಕಾಳುಗಳ

ಕಾಯುತಿರಲು ಕಾಯುತ ಕಾಯುತ ಕಾಯುತಿರಲು
ಎದೆ ನದಿಯಲ್ಲಿ ಕಲ್ಲು ಕರಗುವ ಕಾಲಕೆ
ಕಾಯುತಿರಲು ಕಾಯುತಿರಲು
ಬಂದೂಕಿನ ರಂಗದಲಿ ಚಿಟ್ಟೆಗಳ ನರ್ತನಕೆ
ಕವಿತೆ

ಕವಿತೆ
ಅಪ್ಪನ ಹೆಣ ಹೊತ್ತ ಹೆಗಲ ನೋವಾಗಿರಲು

ಪುಟ್ಟ ಪದದಲಿ ಕವಿತೆ ಕವಿತೆಯೊಳಗೆ ಪುಟ್ಟ ಪದ
ನಾನು ನೀನು ಆನು ತಾನು ತನನನನವಾಗಿರು

ಕವಿತೆ
ಅಪ್ಪನ ಹೆಣ ಹೊತ್ತ ಹೆಗಲು ನೋವಾಗಿರಲು...

■

ಸೌಂದರ್ಯ ಲಹರಿ

ಓ ಶಿಲಾ ಬಾಲೆ ಮುಂಜಾನೆ ಎದ್ದವಳೆ
ಸಂಜೆ ನಿದ್ದೆ ಹೋದವಳೆ ನಿನ್ನ
ಹಗಲು ರಾತ್ರಿಗಳನ್ನೆ ನಾವು ಕಂಡೆವೆ

ನಿನ್ನ ಮುಗುಳು ನಗೆ ಕಣ್ಣುಗಳ ಬಗೆ
ಮೈಮಾಟ ಅದು ಹೇಗೆಂದೆ
ನಮಗೆ ಅರ್ಥವಾಗುವುದಿಲ್ಲ
ನಿನ್ನ ನಿರ್ಮಿಸಿದ ಶಿಲ್ಪಿ ತಾನೇ
ಅದೆಷ್ಟೋ ಹಿಂದಕ್ಕೆ ಸರಿದ
ನಿಸ್ವಾರ್ಥಿ.

ಇಡೀ ಸೌಂದರ್ಯ ಲಹರಿ
ನಿನ್ನ ಮೈಮೇಲೆ ಹರಿಯಿತು
ಆ ಅಲೆಗಳೇ ನಿನ್ನ ದುಕೂಲದ
ನಿರಿಗಳೂ ಆದುವು.

ತಾಯಿಯೆ ಪ್ರಣಯಿನಿಯೆ
ಕ್ಷಣಕ್ಷಣವು ನಮ್ಮ ಬೆರಗುಗೊಳಿಸುವಳೇ ಮಾಯಿಯೇ
ಹೆಸರಿಲ್ಲದ ನಿನ್ನ
ಹೇಗೆಂದು ಕರೆಯಲಿ.

ನಮ್ಮ ನಿಜದ ಹೆಣ್ಣುಗಳು ನಿಲ್ಲ ಬಯಸಿ
ನಿನ್ನ ತ್ರಿಭಂಗಿಯಲ್ಲಿ
ನಿಲುಗನ್ನಡಿ ಮುಂದೆ ಚಡಪಡಿಸುವರು
ಗಂಟೆಗಟ್ಟಲೆ ಅಭ್ಯಾಸ ಮಾಡುವರು

ಸೀರೆಯ ಮತ್ತೆ ಮತ್ತೆ ಬಿಚ್ಚಿ ಕಟ್ಟಿ
ಮೇಲುದವ ಸರಿಪಡಿಸಿ ಕೊರಳ ತಿರುಗಿಸಿ
ಮೈ ಬಳುಕಿಸಿ ಪ್ರಯಾಸದಿಂದ ತಮ್ಮ
ಎದುರು ಹಿಂದಣ ಪ್ರತಿಬಿಂಬಗಳ
ಒಟ್ಟಾಗಿ ನೋಡಬಯಸುವರು ಸೋಲುವರು
ಹೊಕ್ಕುಳದ ಕೆಳಗುಡಲೆ ಹೊಕ್ಕುಳ
ಮೇಲುಡಲೆ ಎಂದು ಯೋಚಿಸುವರು
ನಾಭಿ ಮೋಹನಿಯರು ತಮ್ಮದೇ
ಸೊಂಟದ ಚೆಲುವ ಅವಲೋಕಿಸುತ್ತ
ಮೈಮರೆಯುವರು ಚೆಲುವೆಯರು
ಸ್ವರತಿ ತತ್ಪರರಂತೆ ಅವರ ಈ ವಯ್ಯಾರ
ಮತ್ತದರ ಕೃತಕತೆ ಅಹಾ ನಿನ್ನ ಕಾರಣಕ್ಕೇ
ನಮಗೆ ಇಷ್ಟ

ಮೈಗಿಂತಲು ಮೈಗಂಟಿದ
ಬಟ್ಟೆಯ ಸೊಗಸೆ ಸೊಗಸೆಂದು
ಏನಿಸುವಂತಿತ್ತು ನಿನ್ನ ಸೀರೆ
ನೀ ಕೊಳದಿಂದೆದ್ದು ಬರುವಾಗ
ಅಂತೆಯೇ ಕೂದಲಿಗಿಂತಲೂ ಅದರಿಂದ
ಉದುರುವ ಅದೆಷ್ಟೋ ನೀರ ಹನಿ – ಆ
ಹನಿಗಳಾದರೂ ಉದುರಲೊಲ್ಲದೆ ಮನಸ್ಸಿಲ್ಲದ ಮನಸ್ಸಿನಿಂದ
ಗುರುತ್ವಾಕರ್ಷಣವ ಮೀರಲಾರದೆ
ಮುಂಜಾನೆಯ ಗುಲಾಬಿ ಹೂವ ಕಂಡಾಗಲೂ
ನಮಗೆ ಅನಿಸಿದ್ದಿದೆ
ಹೂವಿಗಿಂತಲು ಅದರ ದಳದ ಮೇಲಣ
ಇಬ್ಬನಿಯೆ ಸೊಬಗೆಂದು ಕ್ಷಮಿಸು
ಇದೆಲ್ಲಾ ನಿನ್ನ ಹೊಗಳುವ ಪರಿಯೆಂದು
ಬೇರೆ ಹೇಳಬೇಕಿಲ್ಲ
ಅಲಂಕಾರಶಾಸ್ತ್ರದಲಿ ಈ
ಪರಿಗೇನು ಹೇಳುವರೊ ನಮಗೆ ಗೊತ್ತಿಲ್ಲ

ಹಕ್ಕಿ ಮತ್ತು ಬಲೆ

ಹಗಲು ಇರುಳಿನ ಬಲೆಯೊಳಗೆ
ಹಕ್ಕಿ ಸಿಲುಕಿದೆ
ಪಕ್ಕದಲ್ಲೇ ಬೇಟೆಗಾರರ ಒಲೆ
ಉರಿಯುತ್ತಿದೆ

ಈಗ
ಹಾಡಲೇಬೇಕು
ಈ ಪುಟ್ಟ ಕೊಕ್ಕಿನಲಿ
ಬೇಟೆಗಾರರು ನಿದ್ರಿಸುವಂತೆ

ಈಗ
ಈ ಪುಟ್ಟ ಕೊಕ್ಕನ್ನೆ
ಖಡ್ಗವಾಗಿಸಬೇಕು
ಬಲೆ ಹರಿದು ಬಯಲಸೇರುವಂತೆ.

ಹಸಿವೆಯ ಹಾಡು

ಅಲೆದೂ ಅಲೆದೂ
ಹೈರಾಣಾದ ಹಸಿವಿಗೆ
ಹಸರಣಗೆ ಹೊಲ ಕಂಡಿತು...

ಮಲಮಲ ಎನ್ನುತ್ತಿದ್ದವು
ಹಲಸಂದಿ ಹೆಸರು ಉದ್ದು ಕಡಲೆ
ಆಗಸಕೇ ಏಕಾಗಿ ನಿಂತಂತೆ
ಹಸಿರು ಕೊರಳು...

ಮುರಿದು ಮುಕ್ಕಬೇಕೆನಿಸಿ ಹಸಿವೆ
ಮುಗಿಬೀಳುವಷ್ಟರಲ್ಲಿ
ಕೀಟಾದಿ ಕೀಟಗಳ ಕಟು ಅಡ್ಡಿ
ನಮ್ಮ ನಂತರ ನಿನ್ನ ಪಾಳಿ!

ಕಿಡಿಕಿಡಿಯಾಯಿತು ಹಸಿವೆ
ನಿಂತು ನಿಂತು
ಹೊರಳಾಡಿತು ಉರುಳಾಡಿತು
ಬಾಚಿದಂತೆ ಕತ್ತು ಒಮ್ಮಿಂದೊಮ್ಮೆಲೆ
ನೆತ್ತರು ಬಣ್ಣದ ಸೀಸೆ!

ಖುಷಿಗೊಂಡಿತು
ಹಸಿವೆಗೋ ಗಾಢ ಹಸಿವು
ಗಟಗಟ ಗುಟುಕರಿಸಿತು
ಹಸಿದಾಗ ವಿಷವೂ ಅಮೃತ
ಚಪ್ಪರಿಸಿತು
ನಿರುಮ್ಮಳವಾಯಿತು

ಅಂತ್ಯಕ್ರಿಯೆಗಂತೂ
ಕಂತೆ ಕಂತೆ ಜೀವ ಜಂತು
ನಾಯಿನರಿ ಹದ್ದು ಕಾಗೆಗಳದ್ದೇ
ಸಾರಥ್ಯ
ಶೋಕ ಸಭೆಯ ತುಂಬ
ಉದರರಾಗದಾಲಾಪ
ಅನುರಣಿಸುತ್ತಿತ್ತು...

ಹಸಿವು

ನಾನು ರಾತ್ರಿಯಲ್ಲಿ ಹಸಿದಾಗಲೆಲ್ಲಾ ನಿನ್ನ ನೆನಪೇ
ಸುಳಿಯುತ್ತದೆ ಪ್ರಿಯೇ.
ಇತ್ತೀಚೆಗೆ ರಾತ್ರಿಗಳು ದೀರ್ಘವಾಗುವುದರತ್ತ ಗಮನ ಹರಿಸಿವೆ.
ನಾನು ನಿನ್ನ ನೆನಪನ್ನು ಆಸ್ವಾದಿಸುವ ರಾತ್ರಿಗಳು ಇನ್ನೂ
ದೀರ್ಘವೆನಿಸುತ್ತವೆ.

ಹೌದು, ನಾನು ಬಲ್ಲೆ ರಾತ್ರಿಗಳು ಹುಟ್ಟುವುದು ಹಗಲುಗಳನ್ನು
ಕೊಂದುಕೊಂಡೇ ಎಂದು; ಇಲ್ಲದಿದ್ದರೆ ನಿನ್ನ ಹಸಿವು ಅಷ್ಟಾಗಿ
ನನ್ನನ್ನು ಬಾಧಿಸುತ್ತಿರಲಿಲ್ಲ.

ನಾನು ಎಳೆಯ ಬಿಸಿಲಿಗೆ ಹಾತೊರೆದರೂ ನನ್ನ ವಾತಾವರಣ
ಸಂಜೆಗತ್ತಲಿಗೇ ಸೆಳೆದಂತೆ ಅನಿಸುತ್ತದೆ.
ಆಗೆಲ್ಲಾ ನಿನ್ನ ಹಸಿವು ತೀವ್ರವಾಗುತ್ತಲೇ ಸಾಗಿರುತ್ತದೆ.
ಕೆಲವು ರಾತ್ರಿಗಳಲಿ ರಾತ್ರಿಯಲ್ಲಿ ನಿನ್ನ ಹಸಿವು ತೀರಿದ ಬಳಿಕ
ನಾನೇನು ಹಾಗೇ ಗಾಢನಿದ್ದೆಗೆ ಜಾರುವುದಿಲ್ಲ.
ನಿನ್ನ ಹಸಿವಿನ ಕುರಿತೇ ಬರೆಯುತ್ತೇನೆ.
ಬರೆದಂತೆ ಅವು ಹಸಿವಿನ ಕವಿತೆಗಳೇ ಆಗುತ್ತವೆ.
ಯಾವ ಸಾಲುಗಳೂ ತುಂಬಿದಂತೆ ಅಥವಾ ಆ ಮಟ್ಟದ
ತೃಪ್ತಿಯ ಒಂದು ಸುಳಿವನ್ನೂ ಬಿಟ್ಟು ಕೊಡದೇ ಸುಮ್ಮನೆ
ನಿರ್ಲಿಪ್ತವಾಗಿರುವುದನ್ನು ಕಂಡು ಅನೇಕ ಬಾರಿ ನಿಟ್ಟುಸಿರುಬಿಟ್ಟಿದ್ದೇನೆ.

ನಿರ್ದಾಕ್ಷಿಣ್ಯದ ಮನಃಸ್ಥಿತಿಯ ನಡುವೆಯೂ ಉಳಿಸಿಕೊಂಡ
ಎಷ್ಟೋ ಪದ್ಯಗಳು ಈಗಲೂ ಹಸಿದ ಸಿಂಹಗಳಂತೆ ನನ್ನ
ರಕ್ತದಲ್ಲಿ ಇವೆ.

ತಾವು ಹುಡುಕುವ ಹಾದಿ

ತಾವು ಹುಡುಕುವ ಹಾದಿ

ಕವನ ನನ್ನದಾಗಿತ್ತೆಂದು
ಬೀಗುವಾಗ
ತಿಳಿದಿರಲಿಲ್ಲ ಅದು ನಿಜಕ್ಕೂ
ನನ್ನದಾಗಿತ್ತೆಂದು?

ಮುತ್ತಜ್ಜನ ಅಜ್ಜ
ಕಾಳುಣಿಸಿ ಪೊರೆದ
ಅಕ್ಷರದ ಹಕ್ಕಿ
ಓಲೆಗರಿ ಕೆದರುತ್ತ ಹಾರಿ
ತಾವು ಹುಡುಕಿದ ಹಾದಿ
ಗೂಡು ಕಟ್ಟಿದ ಮಮತೆ

ಮರಿ ಹಾಕಿ, ಮರಿ ಹಾಕಿ
ಎಲ್ಲೆಂದರಲ್ಲಿ
ಅಕ್ಷರಗಳ
ಚೆಲ್ಲಾಪಿಲ್ಲಿ

ಹಾರಿಬಂದ ಜೇನುಹಿಂಡು
ಕಾಲು ಸೋತು ಒಂದು ಕ್ಷಣ
ಕೂತಿದ್ದಕ್ಕೆಲ್ಲ
ಜೇನುಗೂಡಿನೊಡೆತನ
ಲಭಿಸುವ ಹಾಗಿದ್ದಿದ್ದರೆ...

ಅಕ್ಷರದ ಮರಿ
ಬರೆದವನ ಒಳಗಿಂದ
ನೀರು ಹುಡುಕುತ ಜಾರಿ
ಮೊರೆದವನ ಮಡಿಲಿಗೆ
ನೆಲೆ - ನೆಲಾಂತರದಿಂದ
ತಲೆ - ತಲೆಮಾರಿನವರೆಗೆ

ಕವನ ನನ್ನದಾಗಿತ್ತೆಂದು
ಬೀಗುವಾಗ ನಿಜಕ್ಕೂ
ತಿಳಿದಿರಲಿಲ್ಲ– ಅದು
ನಿನದಾಗಿತ್ತೆಂದು ?

■

ಲ್ಯಾಬ್ ಎಕ್ಸಾಮ್

ಪುರವಣಿಯೊಂದು
ಜಗದ ಮಾನವನ್ನೆಲ್ಲ
ಒಳಬಿಟ್ಟುಕೊಳ್ಳುವ
ಬಾಗಿಲ ಬಳಿ ಹಾರಿದೆ

ಮುಂಗುರುಳ ಸುರುಳಿಯೊಂದು
ಕಿವಿಯೋಲೆಗೆ ಸುತ್ತಿಕೊಂಡಿದೆ
ಆ ಕ್ಷಣ ಸೀಟ್ ನಂಬರ್ ಕೂಡ ಮರೆತಿದೆ

ಓದಿಕೊಂಡು ಬಂದ ಹದಿನೈದನ್ನೂ ಬಿಟ್ಟು
ಹದಿನಾರನೇ ಪ್ರೋಗ್ರಾಮ್ ಕೇಳಿಬಿಟ್ಟಿದ್ದಾರೆ.

ಉಗುರೂ ಕೂದಲೂ ಬೆಳೆಯುತ್ತಿದೆ
ಕೈಗೆ ಕಟ್ಟಿದ ದಾರ ಮಾಸುತ್ತಿದೆ

ಕಿಟಕಿಯ ಎಲ್ಲ ಪರದೆಗಳನ್ನೂ
ಮುಚ್ಚಲಾಗಿದೆ

ಇತ್ತ ಜಾವಾದಲ್ಲಿ ಬರೆದ ಕೋಡ್
ಎಕ್ಸಿಕ್ಯೂಟ್ ಆಗದೇ
ಎಲ್ಲರೂ ಬೆವರುತ್ತಿದ್ದರೆ
ಅಲ್ಲೆಲ್ಲೋ ಬಂಜರಿನಲ್ಲಿ
ಬೀಜವೊಂದು ಟಿಸಿಲೊಡೆದಿದೆ

ಲೋಕದ ಮರಗಳೆಲ್ಲ ಕೆಂಪಾಗಿ ನೀಲಿಯಾಗಿ
ಹಳದಿಯಾಗಿ ಕಂಗೊಳಿಸುತ್ತಿದ್ದರೆ ಜನ
ಎಲ್ಲ ಬಣ್ಣಗಳೂ ಹಸಿರೆಂಬ ಭ್ರಮೆಯಲ್ಲಿದ್ದಾರೆ.

ಕ್ಯಾಂಪಸ್ಸಿನ ಗಾರ್ಡನ್ನಿನಲ್ಲೂ ತರಕಾರಿ ಬೆಳೆಯುತ್ತಾರೆ
ಎಲ್ಲರೂ ಲ್ಯಾಬ್ ಎಕ್ಸಾಮ್ ಮುಗಿಸಿದ ಹುರುಪಿನಲ್ಲಿದ್ದಾರೆ. ■

ನವಿಲ ಕಣ್ಣಿನ ನೋವ ದನಿ

೧
ಜೀವ ಪಸೆಯೊಡೆಯುತಿವೆ
ಕುಣವ ಹಕ್ಕಿಯ ಕನಸ ಕುಡಿಗಳು
ಊರ ಕಿರಾತನ ಕೋಳಿಯ ಮಡಿಲಲ್ಲಿ

'ವ್ಯರ್ಥವಾಯಿತು ಗೆಳೆಯಾ
ನನ್ನ ಗರ್ಭದೊಳಗೆ ಕದಲಿದ
ನಿನ್ನ ಕಣ್ಣ ಸೋನೆಯು'
ಬಿಕ್ಕುತಿದೆ ತಾಯಿ ನವಿಲು.

೨
ತಲೆತಲಾಂತರದಿಂದ
ನನ್ನ ವಂಶ ಪರಂಪರೆಯ ವೈಭವ
ಪೊರೆದಿದ್ದಾಳೆ ಫಲದಾಯಿ ಭೂತಾಯಿ.

ಇಂದವಳು ಬೀಳು ಬಿದ್ದು
ಬೋಳು ಬಯಲಾಗುವುದ ನೋಡಲಾಗದೆ
ಮತ್ತೆ ಉಳುಮೆಗೆ ಮರಳಲೆತ್ನಿಸುತ್ತೇನೆ.

೩
ಸೋತು ಸೋರಿದೆ ರಟ್ಟೆಯ ಸತುವು
ರಂಟೆ ಹೊತ್ತು ನಡೆದ ನಾಲ್ಕೇ ಹೆಜ್ಜೆಗೆ
ಮೂಡಿವೆ ಮೈತುಂಬ ರಂಗು ರಹಿತ
ರಕುತ ಮುತ್ತು ಭರಿಸಲಾಗದ ಒಜ್ಜೆಗೆ

ನನ್ನ ಸುಕ್ಕು ಮುಖದಲಿ ವ್ಯಕ್ತವಾದ
ವೇದನೆ ಸಹಿಸದೆ ಸುರಿದ
ಸಂಗಾತಿಯ ಕರುಳುರಿಯ ಕಣ್ಣೀರು
ನನ್ನನ್ನು ವಿಚಲಗೊಳಿಸುತ್ತದೆ.

೪
ನನ್ನ ಗುಡಿಸಲ ಗೂಡಿನಿಂದ
ಗರಿ ಬಿಚ್ಚಿದ ಗಿಳಿಗಳು
ಕಿಷ್ಕಿಂಧ ಸಂದಣಿಯ ಕಾಳ ನೆರಳಿನಲ್ಲಿ
ನಿರುಮ್ಮಳ ತಾವು ಅರಸುತ್ತಿವೆ.

ಕಾರ್ಖಾನೆಯ ಬೋಂಗಾದ ಆಜ್ಞೆಯ ಸದ್ದು
ನನ್ನ ಹಕ್ಕಿಗಳೆದೆಯ ಹಳ್ಳಿಹಾಡುಗಳನ್ನು
ಕೊಳ್ಳೆ ಹೊಡೆದು ಮಳ್ಳಿಯಂತೆ ನಗುತಿದೆ

೫
ಮಣ್ಣ ಬಿತ್ತಿ ಹೊನ್ನ ಬೆಳೆಯುವ
ನೆಲದೊಲವಿನ ಕರೆಗೆ ನನ್ನೊಡಲ
ಒಂದಾದರೂ ಕುಡಿ ಓಗೊಟ್ಟೀತೆಂಬ
ಆಸೆಯ ದೀಪ ಆರಿಹೋಗಿದೆ.

ನವಿಲು ಮತ್ತು ನಾನು
ಇಬ್ಬರೊಳಗಿನ ಮಳೆಯ ದನಿ
ಹನಿಯುತಿದೆ ಏಕ ರೀತಿ.

ನಮ್ಮನ್ನು ನಾವಷ್ಟೇ ನಂಬಬಾರದು

ನಿನಗೇ ಗೊತ್ತು

ಅವ್ವಾ..
ಹಿತ್ತಲ ಗಳಕ್ಕೆ
ತಗ್ಗಿದ ತಟ್ಟೆ, ಲೋಟ
ಸಿಕ್ಕಿಸುತ್ತಿದ್ದಳು...
'ಅವರಿಗಂತ'

ಅಮ್ಮ ಹಾಗಲ್ಲ
ಬದಲಾದವಳು.
ಒಳಗೆ ಅಸ್ಪಿಕ್ಕಿ ಹಿತ್ತಲಲ್ಲಿ
ತಟ್ಟೆ ತೊಳೆದು ತರುತ್ತಾಳೆ

ನಿನಗೆ ತಿಳಿಸಲೇಬೇಕು

ತಪ್ಪುಗಳೇ ಆದರೂ ಸುಧಾರಿಸಿಕೊಳ್ಳುತ್ತಿವೆ.
ಕಾಲವೂ ಕತ್ತು ತಿರುಗಿಸುತ್ತಿದೆ
ಆದಕ್ಕೆ ನನ್ನ ಮನೆಗೀಗ ಗಳವೂ ಇಲ್ಲ
ಹಿತ್ತಲೂ ಇಲ್ಲ.

ಮತ್ತೀಗ ಬದಲಾದವಳು ಮಗಳು
ಆ ಮಗಳು ಶಾಲೆಯಲ್ಲಿ
ಹಂಚಿ ತಿನ್ನುತ್ತಿದ್ದ ಅಷ್ಟೂ ಡಬ್ಬಿಗಳ
ಜಾತಿ ಕೇಳದವಳು...

ಹೇಳದವಳು...
ಯಾರಿಗಾದರೂ ಗೊತ್ತು?
ನಾ ಹೆಕ್ಕಿ ತಿಂದ ಕಡಲೆ ಬೀಜ ಮಡಿಯದ್ದಾ?
ಮೈಲಿಗೆಯದ್ದಾ??

ನೀನಷ್ಟೇ ಹೇಳಬಲ್ಲೆ...

ನನ್ನ ಕಣ್ಣಲ್ಲಿ ಮಡಿವಂತಿಕೆ ಇಲ್ಲ,
ನಿನ್ನ ಕಣ್ಣು ಮೈಲಿಗೆಯಾಗಿಲ್ಲ,
ಹೀಗಿದ್ದೂ ಮನಸ್ಸು ಹೊರಗಾದದ್ದು ಹೇಗೆ?
ನಿನ್ನವರ ನೋಯಿಸಿದ್ದಕ್ಕೆ
ನನಗೂ ನೋವಿದೆ...
ಗೋಡೆ ಮೇಲಿನ ಅಜ್ಜನಲ್ಲಿ ಪಶ್ಚಾತ್ತಾಪವಿದೆ.
'ಎಲ್ಲ ಮರೆತುಬಿಡು' ಎಂದರೆ
ತಪ್ಪಾಗಬಹುದು.
ತಪ್ಪನ್ನು ಕ್ಷಮಿಸಿಬಿಡು...
ಅಲ್ಲೇ ಆ ತಿರುವಿನ ಆಚೆ ಕಾಯುತ್ತೇನೆ ಬಾ...
ಒಳಹೋಗೋಣ...
ನಮ್ಮ ಮನೆಗೆ...

ಮತ್ತೆ ಕೆದಕಬೇಡ...
ಭಾವ ಬಸಿರಾಗಿದೆ
ಶೋಷಣೆಯನ್ನೇನಿನ್ನು ಹೆರುವುದಿಲ್ಲ
ಕನಸು ಹುಟ್ಟಿಕೊಳ್ಳುತ್ತದೆ ನೋಡು
ಬದುಕು ಬೆಳೆದುಬಿಡುತ್ತದೆ.
ಬಾ ಬದಲಾಗೋಣ
ನಮ್ಮನ್ನು ನಾವಷ್ಟೇ ನಂಬಬಾರದು.

■

ಬಿಡಿಚಿತ್ರಗಳು

ಶಾಲೆಯಿಂದ ಮರಳುವ ದಾರಿಯಲ್ಲಿ
ಯುನಿಫಾರ್ಮಿನ ಮೇಲಿಂದಲೇ ಕಿಬ್ಬೊಟ್ಟೆ ಅಮುಕಿ
ಮುಖ ಕಿವುಚಿ ನಡೆಯುವ ಅಕ್ಕನನ್ನು
ಭಯಬಿದ್ದಂತೆ ನೋಡುತ್ತಿರುವ, ಮುಟ್ಟಿನ ಗುಟ್ಟು
ಗೊತ್ತಿರದ ನಡುಗುದುಟಿ ಹುಡುಗ

'ಭಯ್ಯಾ ಪ್ಲೀಸ್...' ಎಂದು
ಬುರ್ಖಾದೊಳಗಿಂದ ಯಾಚಿಸುವ ಆರ್ತ ಕಣ್ಣುಗಳ
ಹೆಂಗಸಿನ ಉಬ್ಬು ಹೊಟ್ಟೆಯನ್ನು ನೋಡುತ್ತಾ,
ಮೊದಲ ಹೆರಿಗೆಯಲ್ಲಿ ತೀರಿಕೊಂಡ ತನ್ನಕ್ಕನ ನೆನಪಲ್ಲಿ
ಕಣ್ತುಂಬಿ ಸೀಟು ಕೊಡುವುದನ್ನು ಮರೆತ
ಸಿಟಿ ಬಸ್‌ನಲ್ಲಿನ ಇನ್‌ಷರ್ಟ್ ಯುವಕ.

ರಸ್ತೆ ಬದಿಯಲ್ಲಿ ದಪ್ಪ ಕನ್ನಡಕದ
ಒಳಗಿನ ಒಣ ಕಣ್ಣುಗಳಿಂದ
ಹಣ್ಣು ಆರಿಸುತ್ತಿರುವ ಅಜ್ಜನ
ದೃಷ್ಟಿ ತಪ್ಪಿಸಿ ತಕ್ಕಡಿ ಸೇರಿದ
ಒಂದೇ ಕೊಳೆತ ಕಿತ್ತಳೆ.

ಕೆಂಪುಗೆರೆ ಎಳೆದ ಅಂಕಪಟ್ಟಿ ಕೊಟ್ಟು
ಸಹಿಗಾಗಿ ತಲೆತಗ್ಗಿಸಿ ನಿಂತ
ಪೋರನ ಕಿವಿ ತಟ್ಟಿ ದಾಟಿ, ಕೆಂಪಡರುತ್ತಿರುವ
ಅಪ್ಪನ ಕಣ್ಣುಗಳಲ್ಲಿಯೇ ಸುಟ್ಟುಹೋದ
ಆಟಕ್ಕೆ ಕರೆಯುವ ಗೆಳೆಯರ ಕೂಗು.

ರಾತ್ರಿ ಕತ್ತಲಲ್ಲಿ ಬ್ರೇಕ್ ಸವೆದ ಸೈಕಲಲ್ಲಿ
ಬರುತ್ತಿರುವಾಗ ಎದುರಿಂದ ಬಂದ
ಕಾರಿನ ಲೈಟಿಗೆ, ಏನೂ ಕಾಣದಂತಾಗಿ
ಕಾಲು ಕೊಟ್ಟು ನಿಂತುಬಿಟ್ಟವನ ಹಣೆಯಲ್ಲಿ
ಮೂಡಿರುವ ಬೆವರ ಹನಿಯ
ಫಳ ಫಳ ಹೊಳೆತ

ಎಲ್ಲವೂ ಅರ್ಧ ಪತ್ರ ಬಿಡಿಚಿತ್ರಗಳಂತೆ
ಒಡೆದು ಹೋಳಾದ ಅಯಸ್ಕಾಂತದಂತೆ
ಒಂದೊಂದೇ ಪಾರ್ಶ್ವಗಳಿಂದ ಕೂಡಿ ಇಡಿಯಾದಂತೆ
ಮನದ ನೆಲ ಕಂಪಿಸಿ ಸಣ್ಣ ಬಿರುಕು
ಒಳಗೆಲ್ಲೋ ಅನಾಮಿಕ ಬೀಜ ಮೊಳೆತು
ಹಸಿಗೊಂಡಂತೆ ಜೀವವಾಹಿನಿಯ ಹೊಳವು.

ಬುದ್ಧ ನಡೆದ ಮೇಲೆ

ಬುದ್ಧ
ನಡೆದು ಬಿಟ್ಟ!
ನನ್ನ ಗತಿಯೇನು?

ಹಿಂದಿರುಗಲೇ?
ಅರಮನೆಗೆ ಸುದ್ದಿ ಮುಟ್ಟಿಸಬೇಕು,
ಪ್ರಜೆಗಳಿಗಾಗಿ ಕಥೆ ಕಟ್ಟಬೇಕು,
ಮೊದಲು ಯಶೋಧರೆಯ ಬಳಿ ಹೋಗಬೇಕು.
ಆದರೆ, ಬಿಟ್ಟು ಹೋಗುವ ಹಂಬಲವೇಕೆ ಹುಟ್ಟಿತೋ ವಿವರಿಸಲಾರೆ.
ಸಾವಿಗಿಂತಲೂ ಘೋರವಾದದ್ದನ್ನು
ಪ್ರತೀದಿನ ನೋಡುತ್ತಲೇ ಇದ್ದೇನಲ್ಲ!

ಇಳಿದಿದ್ದಾನೆ
ಇನ್ನು ರಥ, ಮೇಣೆಗಳ ಹತ್ತಲಿಕ್ಕಿಲ್ಲ
ಪೀತಾಂಬರ-ಶಲ್ಯ, ಒಡವೆ, ಕಿರೀಟ, ಎಲ್ಲದರಿಂದ ಜಾರಿಕೊಳ್ಳಬಹುದು.
ಕಾಡೊಳಗೆ ಬರಿಗಾಲು,
ಊರೊಳಗೆ ಬರಿಗೈ,
ನನ್ನ ಪ್ರಭು ಉಳಿಯಲಾರ.
ಹಸಿವು ಅರಿಯದ ಅರಸ
ಹುಣ್ಣಿಮೆಯನರಸ ಹೊರಟಿದ್ದಾನೆ.
ಹಿಂಬಾಲಿಸಲೆ?
ಒಂದು ವೇಳೆ ಹಿಂಬಾಲಿಸಿದರೆ,
ಏನಾಗಬಹುದು ನಾನವನಿಗೆ?
ಅವನು ಗುರವಾದ ಕಾಲಕ್ಕೆ
ನಾನು ಬಹುಶಃ ಶಿಷ್ಯನಾಗಬಹುದು.

ಗುರುವಾದಷ್ಟು ಸುಲಭವಲ್ಲ ಶಿಷ್ಯನಾಗುವುದು
ಪರಮಹಂಸರಿಗೂ ಸಿಲ್ಕ್‌ಶರ್ಟಿನ ಚಪಲ ಚಿಗುರಿತ್ತು
ಧರಿಸಿ ನೀಗಿಸಿಕೊಂಡ ಮರುಕ್ಷಣವೇ
ಒಡವೆ ಜವಳಿಗಳ ಮಳಿಗೆ ತೆರೆದಿದ್ದ ರಜನೀಶ.
ಬೆಂಕಿಗೆ ಬೆಂಕಿ ಸುರುವುತ್ತ ತನ್ಮಯನಾಗಿ
ಸಂದಿಹೋಗುವ ತವಕದಲ್ಲಿ ಬೇಯುತ್ತಿರಬೇಕು ಶಿಷ್ಯ;
ಯಾವುದಾದರೊಂದು ಹುಣ್ಣಿಮೆ ರಾತ್ರಿ
ಬೋಧಿವೃಕ್ಷದ ನೆರಳು ಆಸೆಗಳ ಹೀರಬಹುದೆಂದು
ಕಾಯುತ ಕುಳಿತಿರಬೇಕು.

ಅವನೇನೋ ನಡೆದುಬಿಟ್ಟ
'ಆಸೆಯೇ ದುಃಖಕ್ಕೆ ಮೂಲ' ಎನ್ನುವುದ ಸಾರಲು
ಹುಟ್ಟಿದ್ದೇ ಬುದ್ಧನಾಗಿ ಎನ್ನುವವನ ಹಾಗೆ.

■

ಅಭಾವದಿಂದ ಅನುವಾದಗಳವರೆಗೆ.....

ಒಂದು ಭಾಷೆಯಲ್ಲಿ ಒಂದು ನಿರ್ದಿಷ್ಟ ಅವಧಿಯಲ್ಲಿ ಪ್ರಕಟವಾಗುವ ಕೃತಿಗಳ ಅವಲೋಕನವು ಆ ಭಾಷೆಯ ಬರಹಗಾರರು ಆ ಅವಧಿಯಲ್ಲಿ ಕಂಡುಂಡ ಆ ಭಾಷೆಯ ಸಾಮಾಜಿಕ ಸಾಂಸ್ಕೃತಿಕ ಸಂಗತಿಗಳ ಅನಾವರಣವೂ ಆಗಿರುವುದರಿಂದ ಸಾಹಿತ್ಯ ಚರಿತ್ರೆಯ ದಾಖಲೆಯೆಂದೇ ಭಾವಿಸಬೇಕಾಗುತ್ತದೆ. ಆದರೂ ಕಾವೇರಿಯಿಂದ ಕೃಷ್ಣೆಯವರೆಗೂ ವ್ಯಾಪಿಸಿರುವ ಕನ್ನಡದ ಎಲ್ಲ ಕೃತಿಗಳೂ ಒಂದು ಅವಲೋಕನಕ್ಕೆ ಸಿಕ್ಕುವ ಸಾಧ್ಯತೆಗಳೂ ಕಡಿಮೆಯೇ. ಅದರಲ್ಲೂ ಪ್ರತಿವರ್ಷ ಪ್ರಕಟವಾಗುವ ಪುಸ್ತಕಗಳಲ್ಲಿ ಕಾವ್ಯಸಂಕಲನಗಳ ಸಂಖ್ಯೆಯೇ ಅಧಿಕವಿರುವುದು ಎಲ್ಲರೂ ಬಲ್ಲ ಸಂಗತಿ. ಈಗಾಗಲೇ ತಮ್ಮ ಕೃತಿಗಳಿಂದ ಪ್ರಸಿದ್ಧರಾಗಿರುವ ಲೇಖಕರಿಂದ ಹಿಡಿದು ಇನ್ನೂ ಈಗಷ್ಟೇ ಬರೆಯುವ ತುಡಿತಕ್ಕೆ ಸಿಕ್ಕ ಎಳೆಯರವರೆಗೂ ಕವನ ಸಂಕಲನಗಳ ಹರಹು ಇರುವುದರಿಂದ ಈ ಸಮೀಕ್ಷೆ ಪರಿಪೂರ್ಣವಾಗಿರುತ್ತದೆ ಎಂದೇನೂ ಭಾವಿಸಬೇಕಿಲ್ಲ. ಈ ಬರಹಗಾರ ತನ್ನಲ್ಲಿ ಲಭ್ಯವಿದ್ದ ಸಂಕಲನಗಳ ಆಧಾರದ ಮೇಲೆ ಈ ಸಮೀಕ್ಷೆ ನಡೆಸಿದ್ದಾನೆ.

೨೦೦೯ರಲ್ಲಿ ಇಬ್ಬರು ಹಿರಿಯರು ಕಂಬಾರ ಮತ್ತು ಅನಂತಮೂರ್ತಿಗಳ ಸಂಕಲನಗಳ ಜೊತೆಗೆ ಈಗಾಗಲೇ ಕಾವ್ಯಕೃಷಿಯಲ್ಲಿ ಹೆಸರು ಮಾಡಿರುವ ಕೆ.ಜಿ.ಸಿದ್ಧಪ್ಪ, ಎಸ್.ಮಂಜುನಾಥ್, ಸವಿತಾ ನಾಗಭೂಷಣ ಮತ್ತು ಎಚ್.ಎಲ್. ಪುಷ್ಪ ಅವರ ಸಂಕಲನಗಳೊಟ್ಟಿಗೆ ಜ್ಯೋತಿ ಗುರುಪ್ರಸಾದ್, ಸಂತೋಷ ಚೊಕ್ಕಾಡಿ, ಸ್ವಾಮಿನಾಥ, ಚಂ.ಸು.ಪಾಟೀಲ, ಆಲೂರು ದೊಡ್ಡನಿಂಗಪ್ಪ ಮತ್ತು ಎಚ್.ಆರ್.ರಮೇಶರ ಸಂಕಲನಗಳೂ ಸ್ಪರ್ಧೆಗಿಳಿದಿವೆ. ಇವಲ್ಲದೇ ಇದೇ ಪ್ರಥಮ ಬಾರಿಗೆ ಸಂಕಲನ ಪ್ರಕಟಿಸಿರುವ ಕತೆಗಾರ್ತಿ ಸುನಂದಾ ಪ್ರಕಾಶ ಕಡಮೆ, ಸಂತೆಬೆನ್ನೂರು ಫೈಜ್ನಟ್ರಾಜ್, ಆರಿಫ್ ರಾಜ, ಕೆ.ಎಸ್. ಶ್ರೀನಿವಾಸಮೂರ್ತಿ, ಎಂ.ಎಸ್.ರುದ್ರೇಶ್ವರ ಸ್ವಾಮಿ, ಶ್ರೀದೇವಿ ಕೆರೆಮನೆ, ಛಾಯಾ ಭಗವತಿ, ಸಿದ್ದು ದೇವರಮನಿ, ಡಾ.ಸಿ.ರವೀಂದ್ರನಾಥ, ರಶ್ಮಿ ಹೆಗಡೆ ಕನ್ನಡ ಕಾವ್ಯ ಶ್ರೀಮಂತಿಕೆಗೆ ತಮ್ಮ ಛಾಪು ಸೇರಿಸಿದ್ದಾರೆ. ಇಷ್ಟಲ್ಲದೇ ರಿಲ್ಕೆ (ಅನಂತಮೂರ್ತಿ), ಪಾಬ್ಲೊ ನೆರೂಡ(ಜ.ನಾ.ತೇಜಶ್ರೀ),ಕೈಫಿ ಆಜ್ಮಿ (ವಿಭಾ) ಮಿರ್ಜಾ ಗಾಲಿಬ್(ಡಾ.ಎನ್.ಜಗದೀಶ್ ಕೊಪ್ಪ) ಕೂಡ ಕನ್ನಡಕ್ಕೆ ಬಂದಿದ್ದಾರೆ.

ಯು.ಆರ್.ಅನಂತಮೂರ್ತಿಗಳ 'ಅಭಾವ' ಕಾವ್ಯಾಸಕ್ತರನ್ನು

ಖುಷಿಗೊಳಿಸುತ್ತದೆ. ವರ್ಷದ ಕಡೆಯಲ್ಲಿ ಚಂದ್ರಶೇಖರ ಕಂಬಾರರ 'ಎಲ್ಲಿದೆ ಶಿವಾಪುರ' ಪ್ರಕಟವಾಗಿದೆ. (೨೦೧೦ರ ಜನವರಿ ೨ರಂದು ವಿದ್ಯುಕ್ತ ಬಿಡುಗಡೆಯಾಗಿದೆ), ೨೦೦೨ರ 'ಇಲ್ಲಿಯವರೆಗಿನ ಕವಿತೆಗಳು' ನಂತರ ಇದೀಗ ಕೇವಲ ೧೮ ಕವಿತೆಗಳ ಸಂಕಲನ 'ಅಭಾವ'ವನ್ನು ಪ್ರಕಟಿಸಿರುವ ಅನಂತಮೂರ್ತಿಗಳು ಅವರ ಗದ್ಯದಷ್ಟು ಸರಾಗವಾಗಿ ಓದುಗರನ್ನು ತೃಪ್ತಿಪಡಿಸಲಾರರಾದರೂ ಅವರು ಸೃಷ್ಟಿಸುವ ರೂಪಕಗಳಿಂದ ಪ್ರಿಯರಾಗುತ್ತಾರೆ. 'ಉತ್ತುವ ಮನಸ್ಸಿಗೆ ಫಲವಾತ್ತಾಗುತ್ತ.' ಎನ್ನುವ ಸಾಲುಗಳ ಮೂಲಕ ಬದುಕಿನ ಮಾಗುವಿಕೆಯ ಮತ್ತು ವಿನಯ ಹಾಗೂ ಮಾರ್ದವತೆಯ ಪ್ರತಿನಿಧಿಯಂತೆ ಕಾಣಿಸುತ್ತಾರೆ. 'ಕಾವ್ಯದ ಆತ್ಮಾನುಸಂಧಾನ' ಅನ್ನುವ ಪದ್ಯವಂತೂ ಅದರ ಶೀರ್ಷಿಕೆ ಸೂಚಿಸುವ ಹಾಗೇ ಅನುಭವವೊಂದು ಪದ್ಯವಾಗಿ ಬೆಳೆಯುವ ಮತ್ತು ಚಿರಕಾಲ ಮನಸ್ಸೊಳಗೆ ನಿಲ್ಲುವ ಸಂಗತಿಯಾಗಿ 'ಕಷ್ಟ; ಸಂಕಲ್ಪ ಸಾಲದು; ಅದೃಷ್ಟ ಬೇಕು' ಅನ್ನುವ ಕವಿಯ ಮಾತಿಗೆ ಓದುಗ ಸಂಭ್ರಮ ಪಡುತ್ತಲೇ ತನ್ನೊಳಗಿನ ಅನುಭವಗಳನ್ನು ನೆನೆಯುವಂತೆ ಮಾಡುತ್ತದೆ. 'ಈ ನಮ್ಮ ಕಾಲದಲ್ಲಿ ಏನೇನು ಚಂದ?' ತುಂಟತನವನ್ನೂ ಕವಿತೆಯಾಗಿಸಬಹುದೆನ್ನುವುದರ ಸೂಚನೆಯಾದರೆ, 'ಸಾವಿನ ಸನ್ನೆ' ಸಂಕಲನದ ಯಶಸ್ವಿ ಪದ್ಯಗಳಲ್ಲೊಂದು. 'ಓದುತ್ತ ಹೋದುದನ್ನು ಓದುತ್ತಲೇ ಮರೆಯುತ್ತ/ ಮೈಮುರಿಯುತ್ತ ಎದ್ದು ನಿಲ್ಲುವಾಗ/ ಏನದು ಮತ್ತೆ ಹೊಳೆದಂತಾಗುತ್ತದೆ?' ಎಂದು ನಿರಂತರ ಕಾಡುವ ಸಾವಿನ ಸನ್ನೆಯನ್ನು ಅನಾವರಣಗೊಳಿಸುತ್ತಾರೆ. ಕಂಬಾರರ 'ಎಲ್ಲಿದೆ ಶಿವಾಪುರ?' ಎಂದಿನಂತೆ ಅವರಿಗೆ ಪ್ರಿಯವಾದ ಶಿವಾಪುರದಲ್ಲಿ ಕವಿಯ ಹುಡುಕಾಟವನ್ನೇ ವಸ್ತುವಾಗುಳ್ಳದ್ದು. ದೇಶಗಳಳಿದರೂ ಶಿವಾಪುರ ಉಳಿದೇ ಉಳಿಯುತ್ತದೆ ಎಂಬ ಕವಿಯ ಗಾಢ ನಂಬಿಕೆ ಇಲ್ಲಿನ ಎಲ್ಲ ಪದ್ಯಗಳಲ್ಲೂ ತುಂಬಿ ತುಳುಕಿದೆ. ಕಂಬಾರರಿಗಷ್ಟೇ ಒಲಿದಿರುವ ಜಡೆಮುನಿ,ವಿಶಾಲ ಮರ, ಹರಿಯುವ ನೀರು, ಚಂದ್ರಮ ಚುಕ್ಕಿಗಳು ಇಲ್ಲಿನ ಪದ್ಯಗಳಲ್ಲಿ ಕಂಬಾರ ಮುದ್ರೆಗೆ ಸಾಥ್ ನೀಡಿವೆ. ನಾವು ಆಡಿದ್ದು ಮಾಡಿದ್ದು/ ಹರಿದು ಹೋಗಿದೆ ನದಿಯ ತೆರೆಗಳೊಡನೆ/ನಿನ್ನೆಯ ಸತ್ತ ಇಂದಿನ ಚೇಷ್ಟೆಯಾಗಿ/ಕೂಸು ಜೋಗುಳ ಹಾಡಿ ನಮ್ಮನ್ನು ಮಲಗಿಸುತ್ತಿದೆ!-ಎನ್ನುವಷ್ಟೇ ಸಲೀಸಾಗಿ ಕಾಲನಿಗಿಂತ ತರುಣವಾದ ಕಾವ್ಯವಿದೆಯೆಂದು/ನನ್ನಂಥವರ ಮುನ್ನಡೆಸಿ ಹೊಸ ಕ್ಷಿತಿಜ ತೋರಿದವರು (ಅಡಿಗರಿಗೆ) ಎಂದೂ ನೆನೆಯುತ್ತಾರೆ. ಒಂದು ಓದಿಗೆ ದಕ್ಕಲಾರದ, ಪ್ರಬಂಧವೇನೋ ಎನ್ನುವಷ್ಟು ಸವಿವರಗಳ, ಸಾರಾಂಶ ಇಷ್ಟೇ ಎಂದು ಹೇಳಲಾಗದ ಸಂವೇದನಾಶೀಲತೆ ಮತ್ತು ಅನುಭವದೆರಕದ ಈ ಸಂಕಲನ ಬಹಳ ಕಾಲ ಕಾಡುತ್ತದೆ.

'ಗಲ್ಲೆಬಾನಿ' ಅಧ್ಯಾತ್ಮವನ್ನು ವಿವಿಧ ನೆಲೆಗಳಲ್ಲಿ ಶೋಧಿಸುತ್ತಿರುವ ಹಾಗೆಯೇ ಸಿದ್ಧಮಾದರಿಗಳನ್ನು ನಿರಾಕರಿಸಿ ಸ್ವಾನುಭವ ಮತ್ತು ಚಳವಳಿಗಳ ಮೂಲಕ ಕಂಡುಕೊಂಡ ತಾತ್ವಿಕತೆಯನ್ನೇ ಬಸಿದು ಕಾವ್ಯ ಕಟ್ಟುತ್ತಿರುವ ಸಿದ್ಧಯ್ಯನವರ ನಾಲ್ಕನೇ ಖಂಡಕಾವ್ಯ. 'ಇದೀ ದೇಹ ಭವದ ಸಾಲ' ಎನ್ನುವ ಕವಿ 'ಕಟ್ಟಕಡೆಗೆ ಸುಲಿದು ಸುಲಿದು ಸುಲಿದು ಚರ್ಮ ಸುಲಿದು ಮೆಟ್ಟು ಹೊಲೆದು ಮೆಟ್ಟೀ ಮೆಟ್ಟೀ ಮೆಟ್ಟೀ ಬಿಟ್ಟುಬಿಟ್ಟೆ ಮೆಟ್ಟು ಬಿಡುವ ಜಾಗದಲ್ಲಿ' ಎನ್ನುತ್ತಾರೆ. ಕಾಜಗದ ದೋಣಿ ಈಜುವ ಸೋಜಿಗವನ್ನು ಕಾಣಿಸುವ ಸಿದ್ಧಯ್ಯನವರ ಈ ಕಾವ್ಯಾಭಿವ್ಯಕ್ತಿ ಒಂದು ರೀತಿಯಲ್ಲಿ ಆತ್ಮಚರಿತ್ರೆಯೇ ಆಗಿದೆ. ಚಮ್ಮಾರನ ನಿತ್ಯ ಕಾಯಕಕ್ಕೆ ಸಹಕಾರಿಯಾಗಿ ತನ್ನೊಡಲ ತುಂಬ ನೀರು ತುಂಬಿಕೊಂಡಿರುವ ಕಲ್ಲುಬಾನಿ ಈ ಗಲ್ಲೆಬಾನಿ. ಸಾಮಾಜಿಕ ನಡೆಯನ್ನು 'ಸಮಾಜೋ ಅಧ್ಯಾತ್ಮ ಪ್ರಯಾಣ'ವೆಂದು ನಂಬಿರುವ ಸಿದ್ಧಯ್ಯನವರ ಈ ಕಾವ್ಯ ದಮನಿತ ವರ್ಗದ ಸಾಂಸ್ಕೃತಿಕ ಸಂಗತಿಯನ್ನು ಅನಾವರಣಗೊಳಿಸುತ್ತಲೇ ಕವಿಯೊಳಗಿರುವ ಜೀವಸೆಲೆಯಾಗಿ ಬಹುಕಾಲ ಓದುಗನನ್ನು ಕಾಡುತ್ತದೆ. ಕಳೆದ ವರ್ಷವಷ್ಟೇ 'ಮಗಳು ಸೃಜಿಸಿದ ಸಮುದ್ರ' ಹೆಸರಿನ ಸಂಕಲನ ಪ್ರಕಟಿಸಿ ಹೆಸರು ಖ್ಯಾತಿ ಗಳಿಸಿದ್ದ ಎಸ್.ಮಂಜುನಾಥ್ ಮತ್ತೊಂದು ಸಂಕಲನ

'ಜೀವಯಾನ' ಪ್ರಕಟಿಸಿದ್ದಾರೆ. ಹೀಗೆ ವರ್ಷಕ್ಕೊಂದು ಸಂಕಲನ ತರುವ ಯಾರೇ ಇರಲಿ, ಈಗಾಗಲೇ ಅವರು ಗಳಿಸಿದ ಖ್ಯಾತಿ ಮತ್ತು ಅವರಿಗಂಟಿದ ಪ್ರಭಾವಳಿಯ ಮೂಲಕವೇ ಸಾರಸ್ವತ ಲೋಕದ ಬಾಗಿಲು ತಟ್ಟುವುದರಿಂದ ಇಂಥವರು ಸೃಷ್ಟಿಸಿದ ಮಾಯೆಯ ಬಲೆಯನ್ನೇ ವಿಸ್ಮಿತರಾಗಿ ಸಲಹುವ ನಮ್ಮ ಮಾಧ್ಯಮಗಳು ಮತ್ತು ವಿದ್ವಾಂಸರೆಂಬ ವಿಮರ್ಶಕರು ಹಳಬರ ಈ ಆಟಗಳಿಗೆ ಚಪ್ಪಾಳೆ ತಟ್ಟುವ ಭರದಲ್ಲಿ ಇವರೊಟ್ಟಿಗೇ ನಿಂತಿರುವ ಇತರರ ಪ್ರಯತ್ನಗಳನ್ನು ಗಮನಿಸುವ ಗೋಜಿಗೂ ಹೋಗದೇ ಸುಮ್ಮನಿರುವ ಸುಮ್ಮಾನಕ್ಕೆ ಶರಣಾಗಿಬಿಡುತ್ತಾರೇನೋ ಎಂಬ ಅನುಮಾನಗಳೂ ಕಾಡುತ್ತವೆ. 'ಜೀವಯಾನ' ಆತ್ಮ ಚರಿತ್ರೆಯ ಪುಟಗಳಂತೆ ನಮ್ಮ ಮುಂದೆ ಬಿಚ್ಚಿಕೊಳ್ಳುತ್ತ ಹೋಗುವುದಾದರೂ ಇದುವರೆಗೆ ರೂಪಕಗಳಲ್ಲೇ ಮಾತನಾಡುತ್ತಿದ್ದ ಮಂಜುನಾಥ್, ಹೊಸ ಪ್ರಮೇಯವೊಂದನ್ನು ಸೃಷ್ಟಿಸಿದ್ದಾರೆಂದೇನೂ ಅನ್ನಿಸುವುದಿಲ್ಲ. ಅವರು ಪುಸ್ತಕದ ಕಡೆಯಲ್ಲಿ ಪ್ರಕಟಿಸಿರುವ ಟಿಪ್ಪಣಿಯಂತೂ- ಅದರಲ್ಲೂ 'ಒಡಲಾಳ'ಕ್ಕೆ ತಮ್ಮ ಕೃತಿಯನ್ನು ತಾವೇ ಸ್ವತಃ ಹೋಲಿಸಿಕೊಳ್ಳುತ್ತಿರುವುದು ಅಷ್ಟೇನೂ ಆರೋಗ್ಯಕರವಾದುದಲ್ಲ. ಪ್ರಾಯಶಃ ಬೇರೊಬ್ಬರು ಮುನ್ನುಡಿಯ ಮೂಲಕ ಇದೇ ಮಾತುಗಳನ್ನು ಬರೆದಿದ್ದರೆ ಆಗ ಅದು ಬೇರೆಯ ಮಾತು.(ಅನಂತಮೂರ್ತಿ, ಸಿದ್ದಲಿಂಗಯ್ಯ, ತಮ್ಮ ಸಂಕಲನಗಳಿಗೆ ಬರೆದುಕೊಂಡಿರುವ ಸಾಲುಗಳನ್ನು ಗಮನಿಸಿ). ಆದರೂ ಮಂಜುನಾಥ್ ಇವತ್ತು ಬರೆಯುತ್ತಿರುವ ಕವಿಗಳಲ್ಲೇ ಭಿನ್ನವಾಗಿ ನಿಲ್ಲುತ್ತಾರೆ ಮತ್ತು ನಿರಂತರ ಕಾವ್ಯ ಪ್ರಯೋಗಕ್ಕೆ ತಮ್ಮನ್ನು ಒಪ್ಪಿಸಿಕೊಂಡಿದ್ದಾರೆ ಅನ್ನುವುದರಲ್ಲಿ ಯಾವ ಅನುಮಾನಗಳೂ ಇಲ್ಲ. ಒಂದು ಬಗೆಯ ವಿಷಾದ ಇಲ್ಲಿನ ಪದ್ಯಗಳಿಗೆ ಸ್ಫೂರ್ತಿಯಾಗಿದೆ. ಮರಾಠಿಯಲ್ಲಿ ಕಳೆದ ದಶಕದಲ್ಲಿ ಆತ್ಮ ಚರಿತ್ರೆಗಳು ಸುದ್ದಿ ಮಾಡಿದ ಹಾಗೇ ಈ ಬಗೆಯ ಪದ್ಯಗಳು (ಎಚ್.ಎಸ್.ವಿ ಯವರ 'ಉತ್ತರಾಯಣ' ನಾ.ಮೊಗಸಾಲೆಯವರ 'ಇಹಪರದ ಕೊಳ') ಪ್ರಾಯಶಃ ಇನ್ನು ಮುಂದೆ ಹೆಚ್ಚುಹೆಚ್ಚಾಗಿ ಪ್ರಕಟವಾಗಲಿವೆಯೇ ಎಂಬ ಅನುಮಾನವೂ ಕಾಡುತ್ತಿದೆ. ಮನದ ಬನದಲ್ಲಿ ಹೆಜ್ಜೆಯಿಕ್ಕಿದ ನವಿಲೆ (ಮಗಳಿಗೆ), ಅಂಜಿ ನಡುಗಿರಬೇಕು ಪಟದ ದೇವರುಗಳೆಲ್ಲ (ಅಣ್ಣನ ರೋಷಾವೇಷ), ಅಂಗಾಲ ಮುದ್ರಿಸಿದ ಮಳೆ ಬಿದ್ದ ಹೂಮಣ್ಣು (ಊರಿದ ಬೇರಿನ ಗುಂಟ), ಅಂಗೈಯ ಆಕಾಶದಲಿ ಹೊಳೆವ ನಕ್ಷತ್ರ (ಆ ಮುದ್ದು ಕವಚ)ದಂಥ ಸಾಲುಗಳು ಹಾಗೂ ೩೩ ಮತ್ತು ೩೪ನೆ ಪದ್ಯಗಳು ಕವಿ-ಪತ್ನಿ ಮತ್ತು ಮಗಳ ಕುರಿತು ಬರೆದದ್ದು ಖುಷಿಗೊಳಿಸುತ್ತವೆ. ಮಂಜುನಾಥರ ಪ್ರತಿಭೆಗೆ ತಲೆದೂಗಿಸುತ್ತವೆ.

'ಜಾತ್ರೆಯಲ್ಲಿ ಶಿವ' ಸಂಕಲನದಲ್ಲಿ ತಮ್ಮ ಕಾವ್ಯ ಮಾರ್ಗವನ್ನು ತಾವೇ ಮೀರಿದ ಸವಿತಾ ನಾಗಭೂಷಣ ಇದೀಗ 'ದರುಶನ' ಪ್ರಕಟಿಸಿದ್ದಾರೆ. ಉದ್ಬುದ್ಧದ ಭಾಷಣಕ್ಕೋ, ಕಂಡರಿಯದ ಆಧ್ಯಾತ್ಮಕ್ಕೋ ತೆಕ್ಕೆಬೀಳದೆ ಸಹಜ ಲಯ ಮತ್ತು ವಾಸ್ತವದ ಸಣ್ಣ ಪುಟ್ಟ ಪ್ರತಿಮೆಗಳಲ್ಲೇ ತಮ್ಮ ಕಾವ್ಯವನ್ನು ಕಟ್ಟುತ್ತಾರೆ. ಬಾಲ್ಯ, ಅಮ್ಮನ ನೆನಪು, ಪ್ರೀತಿ ಇವುಗಳ ನಡುವೆಯೇ ಬುದ್ಧ, ಗಾಂಧಿ ಕೂಡ ನಸುನಗುವುದು ಈ ಸಂಕಲನದ ವಿಶೇಷ. ಕೆಲವು ಪದ್ಯಗಳು ನೀತಿಪಾಠವಾಗಿ ಬದಲಾಗುವುದು ಏಕೋ ಕವಿಯೇ ಉತ್ತರಿಸಬೇಕು. 'ಗುಜರಾತ್‌ಗೆ ಕವಿ ಸ್ಪಂದನ' ಈ ಸಂಕಲನದ ಹೈಲೈಟ್. ಸಂಕಲನಕ್ಕಾಗುವಷ್ಟು ಪದ್ಯಗಳಾದೊಡನೆಯೇ ಪ್ರಕಟಿಸಿಬಿಟ್ಟರೆ ಜೊಳ್ಳು-ಕಾಳು ಎರಡರ ಮಿಶ್ರಣವೂ ಆಗುತ್ತೆ ಅನ್ನುವುದಕ್ಕೆ ಕೂಡ ಈ ಸಂಕಲನ ಸಹಜ ಉದಾಹರಣೆ.

ಅಮೃತಮತಿಯ ಸ್ವಗತವನ್ನು ಗಾಜುಗೋಳದ ಮೂಲಕ ಹಾಯಿಸಿದ್ದ ಎಚ್.ಎಲ್.ಪುಷ್ಪ 'ಲೋಹದ ಕಣ್ಣು' ತೆರೆದು ಹೊಸ ಕವಿತೆಗಳನ್ನು ಬರೆದಿದ್ದಾರೆ. ಅಲ್ಲಮನ ಪ್ರಭಾವಲಯದ ರೂಪಕಗಳಲ್ಲೇ ಬದುಕನ್ನು ಚಿತ್ರಿಸುವ ಪರಿ ಬೆರಗಾಗಿಸುತ್ತದೆ. ಈಗಾಗಲೇ ತಮಗೆ ಸಿದ್ಧಿಸಿದ ಮಾರ್ಗಗಳಲ್ಲೇ ಅನ್ಯ ಕವಯತ್ರಿಯರು ದಾಪುಗಾಲಿಡುತ್ತಿರುವಾಗ ಈಗಲೂ ಪುಷ್ಪ ಆತಂಕದಲ್ಲಿ ಆಧ್ಯಾತ್ಮವನ್ನರಸುತ್ತಿರುವುದು

ವಿಶೇಷವೆನಿಸುತ್ತದೆ. ಸಂಕಲನದ ತುಂಬ ಸಾರ್ಥಕ ಕವಿತೆಗಳಿರುವುದು, ಒಂದು ಪಾತಳಿಗೆ ಸಿಲುಕದೇ ಆ ಎಲ್ಲ ಕವಿತೆಗಳೂ ತಮಗಿರದ ನೆಲೆಯನ್ನು ಕುರಿತೇ ಶೋಧಿಸುತ್ತಿರುವುದೂ ಹೆಚ್ಚುಗಾರಿಕೆ. 'ಮಳೆಯ ಜಾಡಿನಲ್ಲಿ ಡಾಂಟೆ ಇತ್ಯಾದಿ' ನಿಜದ ಪ್ರಯೋಗ. ಜಂಭದ ಗಾಳಿಕುದುರೆಗೆ ತಿಳಿದಿರಲಿ/ಬಯಲಿಗೆ ಬಯಲು ಎಂದೂ ಜೊತೆಯಲ್ಲವೆಂದು ಎನ್ನುವ ಅರಿವಿರುವ ಕವಿ ಕರುಣೆಯ ಕಣ್ಣು ತೆರೆದಲ್ಲದೆ/ಈ ತನು, ತನುವಿನ ಭವ ಹಿಂಗದು ಎನ್ನುತ್ತಾರೆ. ಅಪ್ಪಳಿಸುವ ಅಲೆಯೆದುರು/ವಿಳಾಸವಿಲ್ಲದ ನಾನು ತಬ್ಬಿಬ್ಬಾಗಿದ್ದೇನೆ/.. ../ಮಾರ್ದನಿಯಿಲ್ಲದ ಪುಟ್ಟ ಹಕ್ಕಿ ಎಂದೂ ಸಂತೈಸಿಕೊಳ್ಳುತ್ತಾರೆ. ಕನ್ನಡ ಕಾವ್ಯದಲ್ಲಿ ಇತ್ತೀಚೆಗೆ ಹೆಚ್ಚಾಗುತ್ತಿರುವ ಆಧ್ಯಾತ್ಮದ ಹುಡುಕುವಿಕೆ ಇಲ್ಲಿನ ಪದ್ಯಗಳ ಮೂಲ ಕೇಂದ್ರ. ಆತ್ಮ ಸಂಗಾತಕ್ಕೆ ನೀನುಂಟು, ಏಕಲವ್ಯನೆಂಬ ಗುರುವಿಗೆ, ದಾರಿ ಕಳಕೊಂಡಿದೆ ಕವಿತೆ, ನದೀಮುಖ, ಕುಣಿವ ನವಿಲುಗಳು ಮುಂತಾದ ಪದ್ಯಗಳು ಪುಷ್ಪ ಅವರು ಶೋಧಿಸುತ್ತಿರುವ ಲೋಕದ ದಾರಿಗೆ ಇಡುತ್ತಿರುವ ಹೆಜ್ಜೆಗಳ ಕುರುಹಾಗಿ ತೋರುತ್ತವೆ.

'ಚಂದ್ರಮತಿಯ ಮಾಂಗಲ್ಯ' ಎನ್ನುವ ಅದ್ಭುತ ರೂಪಕವನ್ನೇ ಹೆಸರಾಗಿಸಿರುವ ಸ್ವಾಮಿನಾಥರ ನಾಲ್ಕನೇ ಸಂಕಲನದಲ್ಲಿರುವ ೪೮ ಪದ್ಯಗಳಲ್ಲಿ ನವೋದಯ, ನವ್ಯ ಮತ್ತು ಬಂಡಾಯದ ಮಿಶ್ರಣವಿದೆ. 'ಪಂಚಭೂತ'ದಂಥ ಸರಳ ಲಯದೊಟ್ಟಿಗೇ 'ರಕ್ಕಸ ಮತ್ತು ರಾಜಕುಮಾರಿ'ಯಂಥ ಕಥನ ಕವನಗಳನ್ನೂ ಅವರು ಬರೆಯಬಲ್ಲರು. ಬಿ.ಸಿ.ರಾಮಚಂದ್ರ ಶರ್ಮ ಹಾಗೂ ಜಿ.ಎಸ್.ಶಿವರುದ್ರಪ್ಪನವರ ಕವಿತೆಗಳ ಓದು ಈ ಕವಿಯ ಹಲವು ರಚನೆಗಳಿಗೆ ಸ್ಫೂರ್ತಿ ನೀಡಿವೆ. ತಕ್ಷಣಕ್ಕೇ ಕತ್ತಲಲ್ಲಿ ಫಳಫಳ ಹೊಳೆಯುವ ತಾಳಿ/ಕೊಳೆತಿತ್ತು ಕಾಲನ ಕಾಲು/ಸಕ್ಕಿತ್ತು ಕಾಮನ ಬಿಲ್ಲು/ಸುಡಿದಿತ್ತು ಕೊರಳು ಕಾಲದಷ್ಟೇ ಸತ್ಯ-ಕಾವ್ಯ. ಸತ್ಯವನ್ನು ನವ್ಯದ ಪ್ರತಿಮೆಗಳಲ್ಲಿ ಹಿಡಿದಿಡುವ ಕವಿಗೆ ಬೇಷ್ ಅನ್ನಲೇಬೇಕಾಗುತ್ತದೆ.

'ಎಡವಟ್ಟು ಬದುಕಿನ ಲಯಗಳು' ಎನ್ನುವ ಕ್ಯಾಚೀ ಹೆಸರಿನ ಸಂಕಲನದ ಮೂಲಕ ಕಾವ್ಯಲೋಕ ಪ್ರವೇಶಿಸಿದ್ದ ಎಚ್.ಆರ್.ರಮೇಶ 'ಸಾಸುವೆ ಹೂವ ಚರಿತೆ' ಎನ್ನುವ ಸಾಮಾನ್ಯ ಹೆಸರಿಗೇಕೆ ಸೋತರೋ ಗೊತ್ತಾಗುತ್ತಿಲ್ಲ. ಸಾಸುವೆ ಅಂದ ಕೂಡಲೇ ನೆನಪಾಗುವ ಬುದ್ಧ ಈ ಸಂಕಲನದ ತುಂಬೆಲ್ಲ ಓಡಾಡಿದ್ದಾನೆ. ಎಲ್ಲ ಹೊಸತು ಎನ್ನುವ ಹಾಗೆ ಬರೆಯುತ್ತಿರುವವರಲ್ಲಿ ಎಚ್.ಆರ್.ರಮೇಶ ಒಬ್ಬರು. ಕವಿತೆ ಅರ್ಥಪೂರ್ಣವಾಗಿದ್ದರೆ ಮಾತ್ರ ಕಾಲದೇಶವನ್ನು ಮೀರಿ ನಿಲ್ಲುತ್ತೆ ಎನ್ನುವ ಅರಿವಿರುವ ಕವಿ, ಹಳೆಯ ರೂಪಕಗಳನ್ನು ಫ್ರಿಜ್ಜಲ್ಲಿಟ್ಟು/ಫ್ರೆಶ್ ಆಗಿ ಅರ್ಪಿಸಲಾರೆ/ಇದೋ ಇಲ್ಲಿ ಬಿದ್ದಿರುವ ಕಲ್ಲನ್ನೇ ಎತ್ತಿ/ಕೊಡುವೆ ಅಂತ ಮೊದಲ ಪದ್ಯದಲ್ಲೇ ಕುತೂಹಲ ಹುಟ್ಟಿಸುತ್ತಾರೆ. ಸಂಕಲನದ ತುಂಬ ಒಟ್ಟಂದಕ್ಕಂಟದೇ ಅಲ್ಲಿಲ್ಲಿ ಚದುರಿಹೋಗಿರುವ ಪದ್ಯದ ವಸ್ತುಗಳು ವಿಕ್ಷಿಪ್ತಮನಸ್ಸನ್ನೇ ಎತ್ತಿ ತೋರುತ್ತವೆ. ಜೈವಿಕ ವಿವರಗಳನ್ನು ಒದಗಿಸುತ್ತಲೇ ಕಾವ್ಯವನ್ನು ಧೇನಿಸುವುದು ಈ ಕವಿಗೆ ಒಗ್ಗಿರುವ ಸಂಗತಿ. ಕವಿಯೊಬ್ಬ ತನಗೆ ತಾನೇ ಆಡಿಕೊಂಡ ಮಾತುಗಳು ಓದುಗನ ಮಾತುಗಳೂ ಆದಾಗ ಕಾವ್ಯ ಯಶಸ್ವಿಯಾಗುತ್ತೆ. ಅಂಥ ಯಶಸ್ಸಿನಲ್ಲೀಗ ರಮೇಶ ಇದ್ದಾರೆ. ಅನಂತಮೂರ್ತಿಯವರ ಮುನ್ನುಡಿ ಕೂಡ ರಮೇಶರ ಕಾವ್ಯಕಸುಬನ್ನು ಉದ್ದೀಪಿಸಿದೆ.

ಸಂತೋಷ ಚೊಕ್ಕಾಡಿಯವರ 'ನಿನ್ನ ರಾಗವ ಹುಡುಕು' ಅವರ ಕಾವ್ಯಯಾತ್ರೆಯ ಮೂರನೆಯ ಕುಸುಮ. ಹೊಸ ಪ್ರಯೋಗಗಳಿಗೆ ಹೋಗದೇ ಸಹಜ ಸರಳ ಲಯಗಳಲ್ಲೇ ತಮ್ಮ ಕವಿತೆಗಳನ್ನು ಆಗಿಸುವ ಚೊಕ್ಕಾಡಿಯವರ ಹಲವು ರಚನೆಗಳು ಸುನೀತದ ರೂಪದಲ್ಲಿವೆ. 'ಮಗಳಿಗೆ' ಅನ್ನುವ ಪದ್ಯ ಜಗದ ಎಲ್ಲ ಅಪ್ಪಂದಿರ ಬಯಾಗ್ರಫಿಯಂತಿದೆ ಎನ್ನುವುದು ಉತ್ಪ್ರೇಕ್ಷೆಯಲ್ಲ. 'ಕಾಯಬೇಕು ಕವಿತೆಗೆ', 'ಕವಿತೆಯ ಹಾದಿ', 'ಕವಿತೆ', 'ನಿನ್ನ ರಾಗವ ಹುಡುಕು', 'ದಿನದ ಯಾತ್ರೆ' ಈ ಕವಿ ಕಾವ್ಯಕ್ಕೆ ಬರೆದ ಭಾಷ್ಯದಂತಿವೆ.

'ಸ್ವರ್ಗ ಕಾಮ', 'ಗಾಢ ಮೌನದ ಇರುಳು' ಬಹಳ ಕಾಲ ಮನಸ್ಸಲ್ಲುಳಿಯುವ ರಚನೆಗಳು. ಸಂಕಲನದ ಪರಿವಿಡಿಯಲ್ಲಿ ಪುಟ ಸಂಖ್ಯೆ ಇರದಿರುವುದು, ಸಗಟು ಖರೀದಿಗಾಗಿ ಪ್ರಕಟಣೆಯ ವರ್ಷವನ್ನೇ ಹಿಂದಕ್ಕೋ-ಮುಂದಕ್ಕೋ ಬದಲಾಯಿಸಿರುವುದೂ, ಕವನಸಂಕಲನಗಳಿಗೆ ಇರುವ ಪ್ರಕಾಶಕರ ಬರವನ್ನು ಸಾಬೀತುಪಡಿಸುತ್ತದೆ.

'ಚುಕ್ಕಿ' ಸಂಕಲನದ ಮೂಲಕ ಹೆಸರು ಮತ್ತು ಖ್ಯಾತಿಗಳನ್ನು ಕಂಡುಕೊಂಡ ಜ್ಯೋತಿ ಗುರುಪ್ರಸಾದ್ ತಮ್ಮ ಎರಡನೆಯ ಸಂಕಲನ 'ಮಾಯಾ ಪೆಟ್ಟಿಗೆ' ತೆರೆದಿಟ್ಟಿದ್ದಾರೆ. ೯೦ ಪದ್ಯಗಳನ್ನು ಈ ಸಂಕಲನದಲ್ಲಿ ಅಡಕಿರಿದಿದ್ದರೂ ಬಹು ಕಾಲ ಮನಸ್ಸಲ್ಲಿ ನಿಲ್ಲುವ ರಚನೆಗಳು ಬಹಳ ಕಡಿಮೆ. ಹೆಸರಿಗಷ್ಟೇ 'ಮಾಯಾಪೆಟ್ಟಿಗೆ' ತೆರೆದರೆ ಅವೇ ಅವೇ ಹಳೆಯ ತಲುಬಿಕೆಗಳ ಆಗರ. ಜೊತೆಗೆ ಕವನ ರಚನೆ ಇಷ್ಟು ಸಲೀಸಾದ ಕೆಲಸವಾಗಿಬಿಟ್ಟರೆ, ಕೂತಲ್ಲಿ ನಿಂತಲ್ಲಿ ಅಧ್ಯಾತ್ಮದ ಹೊಳಹು ಮಿಂಚಿದರೆ, ಕಾವ್ಯ ಕ್ರಿಯೆಯ ಮೇಲೇ ಸಂಶಯಗಳು ಹುಟ್ಟುತ್ತವೆ. ಜೊತೆಗೆ ಸರಳವಾಗಿರುತ್ತವೆ ಎಂಬ ಕಾರಣಕ್ಕೆ ಎಲ್ಲ ಪತ್ರಿಕೆಗಳಲ್ಲೂ ಇಂಥ ರಚನೆಗಳೇ ವಿಜೃಂಭಿಸುತ್ತಿರುವುದನ್ನೂ ವಿಷಾದದಿಂದಲೇ ನೋಡಬೇಕಾಗಿದೆ. ಈಗಂತೂ ಪತ್ರಿಕೆಗಳ ಸಾಪ್ತಾಹಿಕಗಳಲ್ಲಿ, ಮಾಸಿಕ, ವಾರಪತ್ರಿಕೆಗಳಲ್ಲಿ ಮೇಲಿಂದ ಮೇಲೆ ಕಾಣಿಸಿಕೊಳ್ಳುವ ಕೆಲವು ಹೆಸರುಗಳು ಬೇಕೆಂತಲೇ ಆಧ್ಯಾತ್ಮಿಕ ತುಡಿತ, ಬುದ್ಧ, ಅಲ್ಲಮ, ಜೋಗಿ, ಫಕೀರ, ಜಂಗಮ, ಸೂಫಿ ಮೊದಲಾದವರ ಜೊತೆಗಿನ ಅನುಸಂಧಾನವೆಂಬಂತೆ ತಮ್ಮ ಕವಿತೆಗಳನ್ನು ನೇಯುತ್ತಿದ್ದರೂ, ಮೇಲ್ನೋಟಕ್ಕೆ ಅವು ಸಾಧುವೆಂದೆನಿಸಿದರೂ, ಇವರೆಲ್ಲ ವರ್ತಮಾನದಲ್ಲಿ ಕಾಡುತ್ತಿರುವ ಸಮಸ್ಯೆಗಳಿಂದ ಪಲಾಯನ ಮಾಡಿರುವುದರ ಕುರುಹಾಗಿ ತೋರುತ್ತದೆ. ನಗರ ಕೇಂದ್ರಿತ ಸಮಸ್ಯೆಗಳು, ನಿಲ್ಲದ ವರ್ಗ, ವರ್ಣಗಳ ಮೇಲಾಟಗಳು, ಹಿಂಸೆಯ ಬದಲಾಗುತ್ತಿರುವ ಮುಖಗಳು ನಮ್ಮ ಕವಿಗಳನ್ನು ಕಾಡದೇ ಇದೆಯೇ ಅಥವಾ ಅವರೆಲ್ಲ ಲೌಕಿಕದಿಂದ ದಿವಂಗತರಾಗಿದ್ದಾರೆಯೇ ಎನ್ನುವುದೂ ಇಲ್ಲಿ ಮುಖ್ಯ ಪ್ರಶ್ನೆಯಾಗಿದೆ.

ಆದರೂ ಹೊಸಬರ ಬಗ್ಗೆ ತುಂಬು ಭರವಸೆಯ ಮಾತುಗಳನ್ನಾಡುವವರಂತೆ ಅನಂತಮೂರ್ತಿ ಕಂಡರೂ ಇಂಥ ಬರಹಗಳಲ್ಲೂ ಅವರೇ ಮುಂಚೂಣಿಗೆ ನಿಂತು ಹೊಸಬರ ಬಗ್ಗೆಯ ಮಾತೂ ಅವರಿಗೆ- ಅವರೊಪ್ಪಿದ ಸಿದ್ಧಾಂತ ಮತ್ತು ಮೌಲ್ಯಗಳ ಪ್ರತಿಪಾದನೆಯ ಸ್ವತ್ತಾಗುತ್ತದೆಯೇ ವಿನಾ ಮುನ್ನುಡಿ ಬಯಸಿದವರ ಕಾವ್ಯ ಪ್ರಖರತೆಯನ್ನಳೆಯುವ ಸಾಧನವಾಗುವುದಿಲ್ಲವೆಂಬುದನ್ನೂ ಗಮನಿಸಬೇಕು. ಜೊತೆಗೆ ಅನಂತಮೂರ್ತಿಯವರಂಥ ಹಿರಿಯರು ಕಿರಿಯರನ್ನು ಪ್ರೋತ್ಸಾಹಿಸಬೇಕೆನ್ನುವ ಏಕೈಕ ಉದ್ದೇಶದಿಂದ ತೀರ ಧಾರಾಳವಾಗಿಬಿಟ್ಟರೂ ಸೂಕ್ಷ್ಮವನ್ನರಿಯದ ಈ ಕಿರಿಯರು ತಾವೇ 'ಕವಿಶ್ರೇಷ್ಠ'ರೆಂದು ಭಾವಿಸುವ ಅಪಾಯವೂ ಇರುತ್ತದೆ. ವ್ಯಕ್ತಿಗತ ಪರಿಚಯಗಳನ್ನೇ ಮುನ್ನುಡಿಯ ಮಾನದಂಡಗಳನ್ನಾಗಿಸಿಕೊಳ್ಳಬೇಡಿ ಅಂತ ಹಿರಿಯರಿಗೆ ಹೇಳುವುದೂ ಅಸಾಧ್ಯದ ಮಾತು! ಸಂಧ್ಯಾದೇವಿಯವರ ಅದ್ಭುತ ಸಂಕಲನ ಪ್ರಕಟಿಸಿದ್ದ 'ಕಾವ್ಯಮಂಡಲ' ಮಾಯಾಪೆಟ್ಟಿಗೆಯಲ್ಲಿ ಏನು ವಿಶೇಷ ಕಂಡುಕೊಂಡಿತೋ ಆ ಸಂಸ್ಥೆಯೇ ಹೇಳಬೇಕು.

'ಕವಿತೆಗೆ ಬೆಂಕಿ ಬಿತ್ತು' ವಿಲಕ್ಷಣ ಹೆಸರಿನ ಸಂಕಲನ ಪ್ರಕಟಿಸಿದ್ದ ಚಂ.ಸು.ಪಾಟೀಲ 'ಅದಕ್ಕೇ ಇರಬೇಕು' ಅನ್ನುವ ಸಾಮಾನ್ಯ ಹೆಸರನ್ನು ತಮ್ಮ ಹೊಸ ಸಂಕಲನಕ್ಕಿಟ್ಟಿದ್ದಾರೆ. ಪುಸ್ತಕವನ್ನು ಬೇಕಾಬಿಟ್ಟಿ ಪ್ರಕಟಿಸುವ ಪ್ರಕಾಶಕರಿಗೆ ಉದಾಹರಣೆ ಈ ಪುಸ್ತಕ. ಪದ್ಯಗಳಿಗೆ ಪರಿವಿಡಿಯೇ ಇಲ್ಲದಂತೆ ಪ್ರಕಟಿಸಿರುವುದು ಅಕ್ಷಮ್ಯ. ಮುನ್ನುಡಿ ಇಲ್ಲದೆ ಪುಸ್ತಕಗಳನ್ನು ಪ್ರಕಟಿಸುವುದು ಕೆಲವರ ಶೈಲಿಯಾದರೆ ತಮ್ಮ ಸಮಕಾಲೀನರಿಂದ ಒಳ್ಳೆಯ ಮಾತು ಬರೆಸುವ ಸುಲಭೋಪಾಯ ಕೆಲವರದು. ಇಲ್ಲೂ ಹಾಗೇ ಹೆಚ್ಚು ನಿಕಷಕ್ಕೊಡ್ಡದೇ ಪಿ.ಚಂದ್ರಿಕಾ ತಮ್ಮ ಕೆಲಸವನ್ನು ನಿಭಾಯಿಸಿದ್ದಾರೆ. ಹಲವು ಹೇಳಿಕೆಗಳಲ್ಲೇ ಕವಿತೆಗಳನ್ನು ಆಗಿಸುವ ಪಾಟೀಲರು ಪ್ರಾಸಕ್ಕೇ ಗಂಟುಬೀಳುತ್ತಾರೆ. 'ಅದಕ್ಕೇ ಇರಬೇಕು' ಅನ್ನುವ ಪದ್ಯ ಹೊಸ ವಿಸ್ತರಣಕ್ಕೆ ಕೈ

ಇಟ್ಟಿರುವುದರ ಭರವಸೆಯ ಸಂಕೇತ.

'ನೇಕಾರ' ಎನ್ನುವ ಕಾಯಕದ ದೀಕ್ಷೆ ಹಿಡಿದು ಕವನ ಸಂಕಲನವಾಗಿಸಿದ್ದ ಆಲೂರು ದೊಡ್ಡನಿಂಗಪ್ಪ ಹೊಸ ಸಂಕಲನ 'ಮುಟ್ಟು' ತಂದಿದ್ದಾರೆ. ಅಲ್ಲಮನ ಬೆಡಗಿನ ವಚನಗಳನ್ನು ತಮ್ಮ ಕಾವ್ಯಾಭಿವ್ಯಕ್ತಿಯ ಅನುಕೂಲಕ್ಕೆ ಬಳಸಿಕೊಳ್ಳುವ ಆಲೂರು ರಂಗಭೂಮಿಯೊಂದಿಗಿನ ತಮ್ಮ ಸಂಬಂಧವನ್ನೂ ಕವಿತೆಯಾಗಿಸುತ್ತಾರೆ. ತತ್ವಪದಕಾರರೂ ಆಗೀಗ ಇವರ ಕವಿತೆಗಳೊಳಕ್ಕೆ ಇಳಿಯುವುದು ಹಾಗೇ ಕವಿ ಓದುಗನನ್ನು ತನ್ನೊಳಗನ್ನು ಮುಟ್ಟು ಎಂದು ಪ್ರಾರ್ಥಿಸುತ್ತಿರುವುದೂ ಮೊದಲ ಓದಿಗೇ ಶ್ರುತವಾಗುತ್ತದೆ. ಮೊದಲ ಓದಿಗೆ ಥಟ್ಟನೆ ಅರ್ಥವಾಗದ, ಆದರೆ ಆಕರ್ಷಣೆ ಕಳೆದುಕೊಳ್ಳದ ರಚನೆಗಳ ಬಗ್ಗೆ ಕವಿ ಯೋಚಿಸುವುದು ಒಳಿತು. ಸಮುದ್ರವೇ ಉರಿಯುತಿಹುದು/ ಮೀನು ಮೊಸಳೆ ಮರ ಏರಿಹುದ ಕಂಡೆ/ ಉರಿವ ಬೆಂಕಿ ನಂದಿಸಲು/ನೆಲ್ಲುಲ್ಲು ಬಾಧೆ ಖಾಲಿ ಖಾಲಿ... ಸಾಲುಗಳಲ್ಲಿ ಅಲ್ಲಮನನ್ನು ಮೈಮೇಲೇರಿಸಿಕೊಂಡಂತೆ ಕವಿ ಕಾಣುತ್ತಾರೆ.

ಈ ವರ್ಷ ಮೊದಲ ಸಂಕಲನ ಪ್ರಕಟಿಸಿದವರಲ್ಲಿ ಹಿರಿಯರು, ಕಿರಿಯರೂ ಇದ್ದಾರೆ. ಕಥೆಗಾರ್ತಿಯಾಗಿ ಈಗಾಗಲೇ ಪ್ರಸಿದ್ಧರಾಗಿರುವ ಸುನಂದಾ ಪ್ರಕಾಶ ಕಡಮೆಯವರ 'ಸೀಳುದಾರಿ', ಅವರ ಕಥೆಗಳಂತೆಯೇ ನವಿರುತನ ಮತ್ತು ಖಾಸಗಿ ಅನುಭವಗಳ ಅನಾವರಣದ ಕಾರಣದಿಂದಾಗಿ ಮನಸೆಳೆಯುತ್ತದೆ. ಬೆಂಗಳೂರು ಬಿಟ್ಟು ಉಳಿದ ಕಡೆ ಮುದ್ರಣಗೊಂಡ ಪುಸ್ತಕಗಳಲ್ಲಿ ಕಣ್ಣಿಗೆ ಹಿತವಾದ ಫಾಂಟ್‌ಗಳನ್ನು ಬಳಸದ ಮತ್ತು ವಿನ್ಯಾಸದಲ್ಲಿ ಹೊಸತನ ಕಾಣಿಸದ ಕಾರಣ ಆ ಪುಸ್ತಕಗಳ ಓದಿಗೆ ಸ್ವಲ್ಪ ಕಷ್ಟಪಡಲೇಬೇಕಾಗುತ್ತದೆ. ಈ ಸಂಕಲನಕ್ಕೂ ಈ ತೊಂದರೆ ಬಾಧಿಸಿದೆ. 'ಏಣಿ ಗೀಣಿ ಮುಟ್ಟಿದೇನೇ/ನಿಲುಕಬೇಕು ನಕ್ಷತ್ರ ಇಲ್ಲೇ' ಎನ್ನುವ ಕವಿಗೆ, ಪುಟ್ಟ ರೆಕ್ಕೆಗಿರುವ ಭಾರ ಜೀವದ ಅರಿವು ಇರುವುದರಿಂದಲೇ ಸಂಕಲನದ ಕವಿತೆಗಳು ಅಪ್ಪಟ ವೈಯುಕ್ತಿಕ ಅನಿಸಿಕೆಗಳಾಗಿದ್ದೂ ಕವಿತೆಗಳಾಗುವಲ್ಲಿ ಯಶಸ್ವಿಯಾಗಿವೆ. ಎಂ.ಎಸ್. ರುದ್ರೇಶ್ವರ ಸ್ವಾಮಿ 'ಪ್ರೀತಿ ಮತ್ತು ನೀರು' ಅವರ ಮೊದಲ ಸಂಕಲನ ಹೌದೋ ಅಲ್ಲವೋ ಅನ್ನುವ ಅನುಮಾನ ಹುಟ್ಟಿಸುತ್ತಾರೆ. ಬೆಳಕಿನಲ್ಲಿ ಕಂಡದ್ದೆಲ್ಲ ಅರ್ಥವಾಗುವುದಿಲ್ಲ ಅನ್ನುವ ಮಾರ್ಮಿಕ ಹೇಳಿಕೆಯಲ್ಲಿ ಕವಿತೆಯನ್ನರಳಿಸಿ ಸೋಜಿಗ ಹುಟ್ಟಿಸುವ ಈ ಸಂಕಲನದಲ್ಲಿ ಕಲಾವಿದ ಮನೋಹರ್‌ರ ಚಿತ್ರಗಳನ್ನು ಹಿತವಾಗಿ ಬಳಸಿಕೊಂಡಿರುವುದು ಖುಷಿ ತರುತ್ತದೆ. ಮೊದಲನೆಯ ಓದಿಗೆ ಹಿತವೆನಿಸಿದರೂ ಮರು ಓದಿನಲ್ಲಿ ಸಂಕಲನದ ಕವಿತೆಗಳು ಕರೋಕೇಶಿನ ಬೊಂಬೆಗಳಂತೆ ಕಾಣತೊಡಗುತ್ತವೆ.

ಬಹಳ ತಡವಾಗಿ ಸಂಕಲನ ತಂದಿರುವ ಕೆ.ಎಸ್.ಶ್ರೀನಿವಾಸಮೂರ್ತಿ ತಮ್ಮ 'ಸೈಟಾದರೂ ಬೇಡವೇ ಸ್ವಾಮಿ ನಮಗೆ' ಎನ್ನುವ ಹೆಸರಿನ ಸಂಕಲನದ ತುಂಬ ಆಯೋವಾವನ್ನು, ಅಲ್ಲಿನ ಬದುಕನ್ನೂ ಚಿತ್ರಿಸಿದ್ದಾರೆ. ರಾಮಾನುಜನ್ ಅವರ ಕೆಲವು ಕವಿತೆಗಳನ್ನು ನೆನಪಿಸುವ ಶಕ್ತಿ ಇಲ್ಲಿನ ಪದ್ಯಗಳಿಗಿದ್ದರೂ, ಹೊಸ ಪರಿಭಾಷೆಯಲ್ಲಿ ಕನ್ನಡ ಕಾವ್ಯವನ್ನು ಕಟ್ಟುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಪ್ರಾಯಶಃ ಶ್ರೀನಿವಾಸಮೂರ್ತಿಯಂಥವರ ಪ್ರಯೋಗಗಳು ಗಮನಿಸುವವರಿಲ್ಲದಂತಾಗುವ ಅವಸ್ಥೆ ಇಂದಿನದು.

ಪತ್ರಿಕೆಗಳಲ್ಲಿ ಪ್ರಕಟವಾಗುವ ತಮ್ಮ ಕವಿತೆಗಳ ಮೂಲಕ ಈಗಾಗಲೇ ಪರಿಚಿತರಾಗಿರುವ ಆರಿಫ್ ರಾಜರ 'ಜಂಗಮ ಫಕೀರನ ಜೋಳಿಗೆ' ಸಂಕಲನದ ಮುನ್ನುಡಿಯಲ್ಲಿ ಎಚ್.ಎಸ್.ಶಿವಪ್ರಕಾಶ್ ಇವತ್ತಿನ ಕವಿಗಳ ಮಿತಿಗಳನ್ನು ವಿಶ್ಲೇಷಿಸುತ್ತಲೇ ಆರಿಫ್ ಮುಸ್ಲಿಂತನವನ್ನು ಕವಿತೆಯಾಗಿಸುತ್ತಿದ್ದಾರೆಯೇ ಹೊರತು ಕಾವ್ಯವನ್ನು ಇಸ್ಲಾಂ ಧರ್ಮಕ್ಕೆ ಸೇರಿಸುತ್ತಿಲ್ಲ ಎನ್ನುವ ಎಚ್ಚರಿಕೆಯ ಮಾತುಗಳನ್ನಾಡಿದ್ದಾರೆ. ಕಾವ್ಯ ಬರೆಯುವವರಿಗೆ ಅತ್ಯಗತ್ಯ ಬೇಕಿರುವ ಇರುವುದರ ಮೋಹ ಮತ್ತು ಇರದುದರ ದಾಹ ಕುರಿತ ಅವರ

ಮಾತುಗಳು ಕೇವಲ ಆರಿಫ್‌ಗೆ ಮಾತ್ರವಲ್ಲದೆ ಪದ್ಯ ಬರೆಯ ಹೊರಟ ಹೊಸ ತಲೆಮಾರಿನ ಎಲ್ಲ ಕವಿಗಳಿಗೂ ಹೇಳಿದಂತಿದೆ. ದೇವರು ದೊಡ್ಡವನು/ನಿತ್ಯದ ನೀರಸದಲ್ಲೂ ನಮಗೆ ಗೊತ್ತಿಲ್ಲದಂತೆ ಆಗಾಗ/ ಬಹುಮಾನಗಳನ್ನಿಟ್ಟಿರುತ್ತಾನೆ/ಆ ಅಳು ಆಲಿಸಲು ಕೆಲವೊಬ್ಬರಿಗಾದರೂ/ಕಿವಿಗಳನ್ನು ಕೊಟ್ಟಿರುತ್ತಾನೆ (ಆ ಅಳು ಈಗಲೂ ಅಲ್ಲಿ) ಸಾಲುಗಳಲ್ಲಿ ತಮ್ಮ ಮೇಲೆ ಭರವಸೆ ಇಟ್ಟುಕೊಳ್ಳಬಹುದೆಂಬ ವಿಶ್ವಾಸವನ್ನು ಆರಿಫ್ ರಾಜ ಮೂಡಿಸುತ್ತಾರೆ. ಕವಿತೆಗಳ ಶೀರ್ಷಿಕೆಗೂ ಕವಿತೆಗಳಿಗೂ ಬಳಸಿರುವ ಫಾಂಟ್‌ಗಳ ಅಳತೆಗಳಲ್ಲಿ ಹೆಚ್ಚು ವ್ಯತ್ಯಾಸವಿಲ್ಲದಿರುವುದು ಓದಿಗೆ ತೊಡಕಾಗಿದೆ. ಬದುಕಿನ ದುರಂತದ ಮುಖಗಳ ಜೊತೆಜೊತೆಗೇ ಪುಳಕದ ಕ್ಷಣಗಳನ್ನೂ ಕವಿ ದಾಖಲಿಸಿದ್ದಾರೆ.

ತುಂಬ ಅಚ್ಚುಕಟ್ಟಾದ ಮುದ್ರಣ, ಹಿತವಾದ ಮುಖಚಿತ್ರವಿರುವ 'ಪುಟಾಣಿ ಕೆಂಪು ಶೂ' ಛಾಯಾ ಭಗವತಿಯವರ ಮೊದಲ ಸಂಕಲನ. ವ್ಯಕ್ತಿ ಸಂಬಂಧಗಳು ಮತ್ತು ಲಯ-ಪ್ರಾಸಗಳಲ್ಲೇ ಕವಿತೆಗಳನ್ನು ನೇಯುವ ಕವಿಗೆ ಆ ಪ್ರಾಸಗಳೇ ಮಿತಿಯೊದಗಿಸಿವೆ. ಬಹುತೇಕ ಕವಿತೆಗಳ ವಸ್ತುವಾಗಿ ಕವಿಯನ್ನು ಕಾಡಿರುವ ಹೆಣ್ಣು ಮತ್ತು ಕೂಸು ಇಲ್ಲಿನ ಪದ್ಯಗಳಿಗೆ ಸುಲಭ ದಾರಿಯೊದಗಿಸಿವೆ ಅಷ್ಟೆ. ಸಂಕಲನದ ಯಶಸ್ವೀ ಪದ್ಯ ಶೀರ್ಷಿಕೆಯ ಪದ್ಯವೇ ಆಗಿದೆ, ಮತ್ತು ಬಹುಕಾಲ ಕಾಡುತ್ತದೆ ಕೂಡ.

'ನನಗೀಗ ಬೆಳಕಿನದೇ ಧ್ಯಾನ' ಎಂದು ಪರಿತಪಿಸುವ ಸಿದ್ದು ದೇವರಮನಿ 'ಬರುವ ನಾಳೆಗಳಿಗೆ ರಾತ್ರಿಗಳೇ ಇರುವುದಿಲ್ಲ' ಎಂಬ ದೀರ್ಘ ಶೀರ್ಷಿಕೆಯ ಸಂಕಲನ ಪ್ರಕಟಿಸಿ ಪ್ರಖರ ಓಪನಿಂಗ್ ಪಡೆದುಕೊಂಡಿದ್ದಾರೆ. ಆರ್ತಗೊಂಡ ಮನಸ್ಸಿನ ಸಹಜ ಲಯದಲ್ಲಿ ಇಲ್ಲಿನ ಪದ್ಯಗಳು ಬೆಳೆದಿವೆ. ಷಂಡತ್ವವನ್ನು ಗೋರಿಯಿಂದೇಳಿಸಿ ಯುದ್ಧಕ್ಕೆ ಸಿದ್ಧಗೊಂಡ ದೇಶಕ್ಕೆ ಕರೆದೊಯ್ಯುವ ಬಯಕೆಯ ಈ ಕವಿ ಅನ್ನಿಸಿದ್ದನ್ನೆಲ್ಲ ಕಾಗದಕ್ಕಿಳಿಸದೇ ಅವು ಸಾಂದ್ರವಾಗುವವರೆಗೂ ಕಾದು ಬರೆದರೆ ಭವಿಷ್ಯದಲ್ಲಿ ಉತ್ತಮ ಕವಿತೆಗಳನ್ನು ಕೊಡಬಲ್ಲ ತಾಕತ್ತಿರುವವನು.

ಈಗಾಗಲೇ ಸಾರಸ್ವತಲೋಕಕ್ಕೆ ಚಿರಪರಿಚಿತರಾಗಿರುವ ಸಂತೆಬೆನ್ನೂರು ಫೈಜ್ನಟ್ರಾಜ್ 'ಎದೆಯೊಳಗಿನ ತಲ್ಲಣ'ಗಳನ್ನೇ ಸಂಕಲಿಸಿ ಮೊದಲ ಕೃತಿ ಹೊರತಂದಿದ್ದಾರೆ. ಹುಡುಗೀ ನಿನ್ನ ಕಣ್ಣು ಕೊಳ/ಈಜುವಾಸೆ... ಮುಳುಗುವ ಭಯ- ಎಂದು ಬರೆಯುವ ಕವಿ 'ಕವಿತೆಯಾಗು ಎಂದಿಗೂ ಕಥೆಯಾಗಬೇಡ' ಎಂಬ ಎಚ್ಚರವನ್ನು ಇಟ್ಟುಕೊಂಡವರೂ ಆಗಿರುವುದರಿಂದ ಮೊದಲ ಸಂಕಲನದ ಎಲ್ಲ ಪರಿಮಿತಿಗಳ ಜೊತೆಗೇ ಸಹ್ಯವೆನ್ನಿಸುತ್ತಾರೆ. ತೋಚಿದ್ದನ್ನೆಲ್ಲ ಗೀಚದೆ ಧ್ಯಾನಿಸಿದರೆ ತಲ್ಲಣಗಳಿಗೆ ತಹಬಂದಿ ನೀಡುವ ಉತ್ತರ ಈ ಕವಿಗೆ ಸಿಕ್ಕಾವು. ಆಗ ಅವರ ಪದ್ಯಗಳ ರೀತಿಯೂ ಬದಲಿಸೀತು.

'ನಿಜಕ್ಕೂ ನಿನ್ನ ಕಾಡಿದ್ದು, ನೀ ಬೇಡಿದ್ದು ಅವನೊಬ್ಬನೇನೆ?/ನಿಜ ಹೇಳು ಮುಟ್ಟು ಮೈಲಿಗೆ ಬಸಿರು ಬಾಣಂತನ ಕಾಡಲಿಲ್ಲವೇ ನಿನ್ನ?/ನಿಜದ ಅರ್ಜುನರ ರಗಳೆ ದಾಟಲಿಕ್ಕೆ ಈ 'ಚೆನ್ನ'ನೆಂಬೋ ಅರ್ಜುನ ನೀ ತಬ್ಬಿದ ದೋಣಿ ಮಾತ್ರವೇ?' ಎಂದು ಕೇಳುವ ಧೈರ್ಯವಿರುವ ರಶ್ಮಿ ಹೆಗಡೆ 'ಲೆಕ್ಕಕ್ಕೆ ಸಿಗದವರು' ಸಂಕಲನದಲ್ಲಿ 'ಒಳಗಿನ ಸದ್ದುಗಳು ಕಾಲನೆದುರು ಶೀಲ ಕಳೆದುಕೊಳ್ಳದಿರಲಿ' ಎಂದೂ ಪ್ರಾರ್ಥಿಸುತ್ತಾರೆ. 'ಎಷ್ಟು ಬೇಗ ಬಣ್ಣ ಬದಲಾಯಿಸುತ್ತವೆ-ಇಲ್ಲಿ ನಂಬುಗೆಗಳು/ಜಾತ್ರೆಯಿಂದ ಆಸೆಪಟ್ಟು ತಂದ-ಬಣ್ಣದ ಗೊಂಬೆಗಳು' ಎಂಬ ವಾಸ್ತವ ಅರಿತಿರುವವರೂ ಆಗಿರುವುದರಿಂದ ಇವರ ಮುಂದಿನ ಕವಿತೆಗಳ ಬಗ್ಗೆ ಸಹಜ ಕುತೂಹಲ ಮತ್ತು ವಿಶ್ವಾಸವಿಟ್ಟುಕೊಳ್ಳಬಹುದೆಂದು ಅವರೇ ವಿಶ್ವಾಸ ಮೂಡಿಸುತ್ತಾರೆ.

'ನಾನು ಗೆಲ್ಲುತ್ತೇನೆ' ಎನ್ನುವ ಹೆಸರಿನ ಸಂಕಲನ ತಂದಿರುವ ಶ್ರೀದೇವಿ ಕೆರೆಮನೆ ಸಾಮಾನ್ಯ ಲಯ ಮತ್ತು ಪ್ರಾಸಗಳಲ್ಲೇ ಕವಿತೆಗಳನ್ನರಸುವವರು. ಹಾಗಾಗಿ ಅವರ ಪದ್ಯಗಳೆಲ್ಲ ಪ್ರಾಸದ ತ್ರಾಸದಲ್ಲಿ

ಮೇಲುಸಿರುಬಿಡುತ್ತವೆ. ದ್ರೌಪದಿ, ಮಂಥರೆ, ಗಾಂಧಾರಿ, ಊರ್ಮಿಳೆ, ಮಾಧವಿ ... ಇವರ ಪದ್ಯಗಳಲ್ಲಿ ಬರುತ್ತಾರಾದರೂ, ಹಿರಿಯ ಕವಿಗಳ ಓದು ಮತ್ತು ಸುಲಭದಲ್ಲಿ ಪದ್ಯ ಬರೆಯಬಹುದೆನ್ನುವ ಭಾವ ಬದಲಾದರೆ ಇವರು ನಿಜದ ಕವಿತೆಗಳನ್ನೂ ಬರೆದಾರು.

ಮೂರೇ ಮೂರು ಸಾಲುಗಳಲ್ಲಿ ಅನುಭವವನ್ನು ಓದುಗನಿಗೆ ಹೇಗೆ ಯಶಸ್ವಿಯಾಗಿ ದಾಟಿಸಬಹುದೆಂಬುದಕ್ಕೆ ಹಾಯ್ಕುಗಳು ಪ್ರಕಾರ ಒಂದು ಉದಾಹರಣೆ. ಆದರೆ ಈಗಾಗಲೇ ಮಿನಿ-ಮಿಡಿಗಳ ಭರಾಟೆಯಲ್ಲಿ ಕನ್ನಡ ಕಾವ್ಯ ದೊರಕಿಸಿಕೊಂಡದ್ದಕ್ಕಿಂತ ಕಳೆದುಕೊಂಡದ್ದೇ ಹೆಚ್ಚು. ಟ್ಯಾಬ್ಲಾಯ್ಡ್ ಹಾಗೂ ಗಂಭೀರ ಸಾಹಿತ್ಯವನ್ನು ಪ್ರಮೋಟ್ ಮಾಡಲು ಇಷ್ಟವಿಲ್ಲದ ಪತ್ರಿಕೆಗಳು ಮಿನಿ-ಮಿಡಿಗಳನ್ನು ಹಾಗೇ ಹಾಯ್ಕು ಎನ್ನುವ ಮೂರು ಸಾಲಿನ ಭಗವದ್ಗೀತೆಯನ್ನು ಪ್ರಕಟಿಸಿ ಅದನ್ನೊಂದು ಸಾಹಿತ್ಯ ಪ್ರಕಾರವಾಗಿ ಪೋಷಿಸುತ್ತಿವೆ. ಉಳಿದ ಜಾಗ ಭರ್ತಿಮಾಡಲಷ್ಟೇ ಬಳಸಬಹುದಾದ ಆ ಕ್ಷಣಕ್ಕೆ ಹಾಯ್ ಎನ್ನಿಸುವ ಇವು ಗಂಭೀರ ಓದಿಗೆ ರುಚಿಸುವುದಿಲ್ಲ. 'ಮೂರು ಸಾಲು ಮರ' ಎನ್ನುವ ಹಾಯ್ಕು ಸಂಕಲನ ಪ್ರಕಟಿಸಿರುವ ಡಾ.ಸಿ. ರವೀಂದ್ರನಾಥ್ ಒಟ್ಟುಗೂಡಿಸಿದ್ದರ ಅರ್ಧದಷ್ಟು ರಚನೆಗಳನ್ನು ಕೈ ಬಿಟ್ಟಿದ್ದಿದ್ದರೂ ಸಂಕಲನದ ಮೌಲ್ಯವೇನೂ ಕಡಿಮೆಯಾಗುತ್ತಿರಲಿಲ್ಲ.

ಇನ್ನು ಈ ವರ್ಷ ಪ್ರಕಟವಾದ ಅನುವಾದಗಳನ್ನು ಕುರಿತಂತೆ ಎರಡು ಮಾತು: ಮಿರ್ಜಾ ಗಾಲೀಬ್‌ನನ್ನು ಕನ್ನಡಕ್ಕೆ ಬಗ್ಗಿಸಿ ಕೊಟ್ಟಿರುವ ಡಾ. ಎನ್.ಜಗದೀಶ್, ಕೊಪ್ಪ ಪುಸ್ತಕದ ಆಕೃತಿಗೆ ಕೊಟ್ಟ ಗಮನವನ್ನು ತರ್ಜುಮೆಗೆ ಕೊಡದ ಕಾರಣ (ಅವರು ಇಂಗ್ಲಿಷ್ ಮೂಲಕ ಅನುವಾದಿಸಿದ್ದಾರೆ) ಈಗಾಗಲೇ ಪರಿಚಿತನಾಗಿರುವ ಗಾಲೀಬ್ ಹೊಸದೇನನ್ನೂ ಇಲ್ಲಿ ಹೇಳುತ್ತಿಲ್ಲ. ಆದರೂ ಗಾಲೀಬ್ ಮತ್ತು ಅಂದಿನ ಸಾಮಾಜಿಕ ಸ್ಥಿತಿ-ಗತಿಗಳ ಕುರಿತಂತೆ ಅವರು ಕೊಟ್ಟಿರುವ ಟಿಪ್ಪಣಿ ಗಾಲೀಬನ ಗಜಲುಗಳ ಕನ್ನಡ ಅವತರಣಿಕೆಗೆ ಮೂಲ ಉರ್ದುವನ್ನೇ ಆಶ್ರಯಿಸಿದರೆ ಒಳ್ಳೆಯದೊಂದು ಕೆಲಸ ಮಾಡಬಹುದೆಂಬುದರ ಸೂಚನೆಯಾಗಿದೆ.

ಸ್ಪ್ಯಾನಿಷ್ ಭಾಷೆಯಲ್ಲಿ ತನ್ನ ಪದ್ಯಗಳನ್ನು ಪ್ರಕಟಿಸಿದ್ದ ಪಾಬ್ಲೊ ನೆರೂಡ ಜಗತ್ತಿನ ಬಹುತೇಕ ಎಲ್ಲ ಭಾಷೆಗಳಿಗೂ ಅನುವಾದಗೊಂಡಿದ್ದಾನೆ. ಸ್ಪ್ಯಾನಿಶ್‌ನಿಂದ ಇಂಗ್ಲಿಷ್‌ಗೆ ಆಮೇಲೆ ಇತರೆ ಭಾಷೆಗಳಿಗೆ ಇವು ಬರುವುದರಿಂದಾಗಿ ಮೂಲ ಸಾಂಸ್ಕೃತಿಕ ಒತ್ತಡಗಳು ಅನುವಾದಕನ ಅಭೀಪ್ಸೆಗೆ ತಕ್ಕಂತೆ ಬದಲಾಗುತ್ತಲೇ ಹೋಗುತ್ತದೆ. ಇದು ಎಲ್ಲ ಅನುವಾದಕರನ್ನೂ ಕಾಡಿದ ಕಷ್ಟ ಮತ್ತು ಸವಾಲು. ಜ.ನಾ. ತೇಜಶ್ರೀ 'ಕಡಲ ತಡಿಯ ಗುಡಾರ' ಅನುವಾದಿಸಿದ್ದಾರೆ ಅನ್ನುವುದಕ್ಕಿಂತ ರೂಪಾಂತರಕ್ಕೆ ಪ್ರಯತ್ನಿಸಿದ್ದಾರೆ ಎನ್ನುವುದು ಸೂಕ್ತ. ನೆರೂಡನ ರಾಜಕೀಯ ಮತ್ತು ಕ್ರಾಂತಿ ಕುರಿತ ಪದ್ಯಗಳನ್ನು ಬಿಟ್ಟು ಅವನ ಸಾನೆಟ್ಟುಗಳನ್ನು ಮತ್ತು ಪ್ರೇಮ ಕವಿತೆಗಳನ್ನು ಅನುವಾದಕಿ ಆಯ್ಕೆ ಮಾಡಿಕೊಂಡ ರೀತಿ ಸೊಗಸೆನ್ನಿಸುತ್ತದೆ. ಪುಸ್ತಕ ವಿನ್ಯಾಸವೂ ಹಿತವಾಗಿದೆ. ಕನ್ನಡದಲ್ಲಿ ಬೆರಳೆಣಿಕೆಗೆ ಸಿಗುತ್ತಿದ್ದ ಪ್ರಕಾಶಕರ ಸಂಖ್ಯೆ ಗಣನೀಯವಾಗಿ ಏರಿರುವುದನ್ನು ಗಮನಿಸಲೇಬೇಕು.

ಹಿಂದಿ ಸಿನಿಮಾದ ಹಾಡುಗಳನ್ನೂ ಸೇರಿದಂತೆ ಕೈಫಿ ಆಜ್ಮಿಯವರ ಗಜಲುಗಳು ಮತ್ತು ಕವಿತೆಗಳನ್ನು 'ಬೆತ್ತಲೆ ರಸ್ತೆಯ ಕನಸಿನ ದೀಪ' ಎನ್ನುವ ಹೆಸರಲ್ಲಿ ದಿ. ವಿಭಾ ತಿರಕಪಡಿ ಅನುವಾದಿಸಿದ್ದನ್ನು ಇದೀಗ ಲಡಾಯಿ ಪ್ರಕಾಶನ ಪ್ರಕಟಿಸಿ ಅನುವಾದಕಿಗೆ ಹಾಗೇ ಮೂಲಕ್ಕೆ ಗೌರವ ತಂದಿದೆ. ಅಪ್ಪಟ ಕನ್ನಡದವೇ ಅನ್ನಿಸುವ ಇಲ್ಲಿನ ಪದ್ಯಗಳು ಗತಿಸಿದ ಅನುವಾದಕಿಯ ನೆನಪನ್ನು ಹಾಗೂ ಆಕೆಯ ಆಯ್ಕೆಯ ರುಚಿಯನ್ನೂ ತೆರೆದಿಡುತ್ತವೆ.

ಅನಂತಮೂರ್ತಿ ಏನು ಮಾಡಿದರೂ ಸುದ್ದಿಯಾಗುವುದಷ್ಟೇ ಅಲ್ಲ ಅಲ್ಲೊಂದು ಹೊಸತನ

ಇರುತ್ತದೆ. ಅವರ 'ಶತಮಾನದ ಕವಿ ರಿಲ್ಕೆ' ಪುಸ್ತಕ ಕೂಡ ಈ ಮಾತಿಗೆ ನಿದರ್ಶನ. ಈಗಾಗಲೇ ಬ್ರೆಕ್ಟ್, ಯೇಟ್ಸ್ ಮುಂತಾದವರನ್ನು ಕನ್ನಡಕ್ಕೆ ಸಮರ್ಥವಾಗಿ ಪರಿಚಯಿಸಿರುವ ಅವರು ಈ ಸಂಕಲನದಲ್ಲಿ ಬರಿಯ ರಿಲ್ಕೆ ಕವಿತೆಗಳನ್ನಲ್ಲದೇ ರಿಲ್ಕೆಯ ತಂತುಗಳನ್ನು ತಮ್ಮ ಸ್ವಂತದ ಕವಿತೆಗಳಲ್ಲೂ ಕಾಣಿಸಿದ್ದಾರೆ. ಜೊತೆಗೆ ಅನುವಾದವೆನ್ನುವ ಮಹಾಯಜ್ಞದಲ್ಲಿ ಅವರು ಅನುಸರಿಸಿದ ವಿಧಾನವನ್ನು ಟಿಪ್ಪಣಿಸಿ (ಓ.ಎಲ್.ಎನ್. ಅವರ ಟಿಪ್ಪಣಿಯೂ ಸೇರಿದಂತೆ ಪ್ರಕಟಿಸಿ) ಇತರ ಅನುವಾದಕರಿಗೆ ಮಾದರಿಯೂ ಆಗಿದ್ದಾರೆ.

ಹೃದಯ ಬುದ್ಧಿಗಳನ್ನು ಏಕಕಾಲದಲ್ಲಿ ಆವರಿಸಿಕೊಳ್ಳುವ 'ಕವಿ ಸಮಯ' ಈ ಹೊತ್ತಿನ ದಂದುಗಗಳಲ್ಲಿ ಸಿಕ್ಕದಿರುವಂಥದು. ಹಳಬರೆಲ್ಲ ತಮಗೆ ಸಿದ್ಧಿಸಿದ ಹಾದಿಯಲ್ಲಿ ಅಲ್ಲೇ ಗಿರಕಿ ಹೊಡೆಯುತ್ತ ಮತ್ತೆ ಮತ್ತೆ ಅವವೇ ಪ್ರತಿಮೆ, ರೂಪಕಗಳಲ್ಲಿ ಅವರದೇ ಮಾದರಿಗಳಲ್ಲಿ ಮುಂದುವರೆಯುತ್ತಿರುವಾಗ ಹೊಸಬರಂತೂ ನಿಶ್ಶಕ್ತ ಸಾಲುಗಳಲ್ಲಿ ನಿಲ್ಲಲೂ ಆಗದಂಥ ಸ್ಥಿತಿಯಲ್ಲಿದ್ದಾರೆ. ತತ್ವ-ಸಿದ್ಧಾಂತಗಳ ಚಾಣಾಕ್ಷ ಹೆಣಿಗೆಯನ್ನೇ ಕಾವ್ಯವೆಂದು ನಂಬಿರುವ ಕವಿಗಳ ಸಂಖ್ಯೆಯೂ ಹೆಚ್ಚುತ್ತಿದೆ. ಈ ವರ್ಷ ಪ್ರಕಟವಾದ ಕವನ ಸಂಕಲನಗಳ ಜೊತೆಗೇ ಪ್ರಕಟವಾದ ಅನುವಾದಗಳು ಹೇಗೆ ನಮ್ಮನ್ನು ಶ್ರೀಮಂತಗೊಳಿಸಿವೆ ಎನ್ನುವ ಬೆರಗನ್ನಷ್ಟೇ ನಿಮ್ಮೊಂದಿಗೆ ಹಂಚಿಕೊಳ್ಳುತ್ತ (ಈ ವರ್ಷ ಪ್ರಕಟವಾದ ಸಂಕಲನಗಳ ಪ್ರಾತಿನಿಧಿಕ ಅಂಶಗಳನ್ನಿಟ್ಟುಕೊಂಡು ಆಲೋಚಿಸಹೋದರೆ ಅದೇ ಒಂದು ಪ್ರೌಢ ಪ್ರಬಂಧಕ್ಕಾಗುವ ವಸ್ತು ಎನ್ನಿಸಿದ್ದರಿಂದ ಪುಟಮಿತಿಯ ಕಾರಣದಿಂದಾಗಿ ಇದಕ್ಕಿಂತ ಹೆಚ್ಚು ಹೇಳುವುದು ಸಾಧ್ಯವಾಗುತ್ತಿಲ್ಲ), ಈ ಲೇಖನವನ್ನು ಪರಿಸಮಾಪ್ತಿಗೊಳಿಸುತ್ತಿದ್ದೇನೆ.

- ಡಿ.ಎಸ್.ರಾಮಸ್ವಾಮಿ

ಭಾರತೀಯ ಜೀವ ವಿಮಾ ನಿಗಮ

ಅರಸೀಕೆರೆ ೫೭೩ ೧೦೩



.ಜಿ. ವಾಸುದೇವ ಅವರ ಕಲಾಕೃತಿ

- 2006

"ಗತ ಪ್ರಸ್ತುತ" ಪುಸ್ತಕದಿಂದ

ಸಂಚಯ

ಗ್ಯಾಲರಿ

SANCHAYA (Bi-Monthly), MAG(2) PRB-DECL : 309/94-95



ಈಗ ಮಣ್ಣು ಬಂಜರೋ
ಬೀಜ ಜೊಳ್ಳೋ
ಎಂದು ಕವಿಗಳು ಯೋಚಿಸುತ್ತಿದ್ದಾರೆ.

ನಾನು ಆಡುವ ಮಾತು ನನ್ನನ್ನೆ ಕಾಣಬಲ್ಲವೆ?
ಕಷ್ಟ ಸಂಕಲ್ಪ ಸಾಲದು; ಅದೃಷ್ಟ ಬೇಕು.

ಈಗ ಹೇಳು: ಲೋಕದಲ್ಲಿರೋದು ಒಂದು ಸತ್ಯವ?
ಹಗಲಿಗೊಂದೇ ಕಣ್ಣಾದರೆ ಕತ್ತಲೆಗೆ ಸಾವಿರ!
ಹಗಲಿಗೆ ಒಂದೇ ಸತ್ಯವಾದರೆ ಕತ್ತಲೆಗೆ
ಕಣ್ಣು ಹೊಡೆದು ಚಳ್ಳೇಹಣ್ಣು ತಿನ್ನಿಸುವ
ಸತ್ಯಗಳು ಸಾವಿರಾರು!

ಈಗ
ಈ ಪುಟ್ಟ ಕೊಕ್ಕನ್ನೆ
ಖಡ್ಗವಾಗಿಸಬೇಕು
ಬಲೆ ಹರಿದು ಬಯಲಸೇರುವಂತೆ.

Edited, Printed & Published by
D.V. PRAHLAD,
No. 100, 2nd Main, 6th Block
3rd Stage, 3rd Phase, Banashankari,
Bangalore - 560 085, Ph : 080-2679 1925